# ಗಣಿತ
# MATHEMATICS

## ಭಾಗ - 2
**PART 2**

## ತರಗತಿ II
**Standard II**


ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

**2025**

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

II

# ಗಣಿತ

*Prepared by*

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in, e-mail : scertkerala@gmail.com
Typeset and design by : SCERT
First Edition - 2025
Printed at : KBPS, Kakkanad, Kochi
© Department of General Education, Government of Kerala

ಪ್ರೀತಿಯ ಮಕ್ಕಳೇ,

ಗಣಿತ ಕಲಿಕೆಯನ್ನು ರಸವತ್ತಾಗಿ ಮಾಡಲು
ವೈವಿಧ್ಯಪೂರ್ಣವಾದ ಸಂಪನ್ಮೂಲಗಳನ್ನು ಒಳಗೊಂಡು
ಎರಡನೆಯ ತರಗತಿಯ ಗಣಿತ ಪಾಠ ಪುಸ್ತಕವನ್ನು
ನಿಮಗಾಗಿ ತಯಾರಿಸಲಾಗಿದೆ.
ಇದರ ಚಟುವಟಿಕೆಗಳನ್ನು ಆಸ್ವಾದಿಸುತ್ತಾ ಪೂರ್ತಿಗೊಳಿಸಲು
ನಿಮಗೆ ಸಾಧ್ಯ. ಆ ಮೂಲಕ ಹೊಸ ಹೊಸ
ಅರಿವನ್ನು ನಿರ್ಮಿಸಲು ಸಾಧ್ಯವಿದೆ.
ಗಣಿತದ ಸಮಸ್ಯೆಗಳನ್ನು ಪರಿಹರಿಸಲು
ವಿಭಿನ್ನ ರೀತಿಗಳನ್ನು ಪರಿಚಯಿಸುವುದರೊಂದಿಗೆ
ಜ್ಞಾನದ ಉನ್ನತ ಮಟ್ಟಕ್ಕೆ ಏರಲು ಈ ಪುಸ್ತಕವು
ನಿಮಗೆ ಸಹಕಾರಿಯಾಗಲಿ ಎಂದು ಹಾರೈಸುತ್ತೇನೆ.

ಪ್ರೀತಿಪೂರ್ವಕ,

**ಡಾ. ಜಯಪ್ರಕಾಶ್ ಆರ್. ಕೆ.**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ. ಕೇರಳ

# Textbook Development Team

## Advisor

**Dr. E. Krishnan**
Head (Rtd.) Department of Mathematics,
University College, Thiruvananthapuram

## Chairperson

**Dr. Narayananunni M.P.**
Senior Lecturer (Rtd.), DIET Malappuram

## Experts

**Dr. Jayadevan S.K.**
Senior Lecturer,
DIET Kannur

**K.R. Muraleedharan Pillai**
Senior Lecturer (Rtd.),
DIET, Kollam

**T. Suresh**
Senior Lecturer (Rtd.),
DIET, Kasaragod

**Dr. Ramesh Kumar P.**
Professor & Head (Rtd.)
University of Kerala, Thiruvananthapuram

## Members

**K.K. Sureshbabu**
Teacher (Rtd.),
Palayad Central JB School,
Palayad, Kannur

**Sajeevan C.V.**
LPSA, ALPS Kariyil,
Cheruvathoor,
Kasaragod

**Soudamini K.V.**
HM (Rtd.), GLPS Maithani,
Cheruvathoor,
Kasaragod

**Kunjabdulla M.**
HM (Rtd.), Muyippoth MUPS,
Kozhikode

**Beena Stephen**
LPSA, SPTPM GLPS
Kuravankonam, TVPM

**K.G. Thulaseedharan Pillai**
HM (Rtd.), GLPS Anchal,
Kollam

**Anurenj C.E**
LPST GLPS, Velloorkonam,
Thiruvananthapuram

**Muhammed Basheer**
LPST, Sethusitaram ALPS Elathur,
Kozhikode

**Niyas S.**
LPSA, Govt. JB School,
Punnapra, Alappuzha

**Shaju Neravath, Deepu Mohan, Ratheesh Kasaragod, Devika S.D Chirayinkeezh**

## Kannada Version

**Yatheesh Kumar Rai K**
Rtd. Principal, GHSS Bellur

**Yashoda K.A.**
HM, GLPS Chandragiri

**Shriharsha M.P.**
HM, GJBS Peral

---

## Academic Coordinator

**Dr. Meena S.**
Assistant Professor, SCERT Kerala

**State Council of Educational Research and Training (SCERT)**
Vidhyabhavan, Poojappura, Thiruvananthapuram 695 012



# ಅನುಕ್ರಮಣಿಕೆ




| | | | |
|---|---|---|---|
| 6 | ಅರಣ್ಯೋತ್ಸವ |  | 96 |
| 7 | ಗೆಳೆಯರ ಬಳಗ |  | 112 |
| 8 | ಅಳೆದು ನೋಡುವ |  | 130 |
| 9 | ಕ್ಯಾಲೆಂಡರ್ ಆಟಗಳು |  | 142 |
| 10 | ಒಲವಿನ ಸಂಬಂಧಗಳು |  | 154 |
| 11 | ಎಣಿಸಿ... ಎಣಿಸಿ... ಕೋಣೆಯೊಳಗೆ |  | 166 |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ “ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ” ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.







ನಾನು..................................................................................................

..............................................................ತರಗತಿಯಲ್ಲಿ ಕಲಿಯುತ್ತೇನೆ.



ನನ್ನ ತಾಯಿ :

ನನ್ನ ತಂದೆ :

ನನ್ನ ಟೀಚರ್ :

ನನ್ನ ಶಾಲೆ :



ಫೋನ್ ನಂಬ್ರ :

ಆಧಾರ್ ನಂಬ್ರ :




ಸ್ವಾಗತ

# 6

# ಅರಣ್ಯೋತ್ಸವ




ಪ್ರಿಯರೇ...
ಸರ್ಕಸ್... ಮರಣಗುಂಡಿ...
ಕಸರತ್ತು... ಸಂತೆಗಳು...
ಸಾಂಸ್ಕೃತಿಕ ಕಾರ್ಯಕ್ರಮಗಳು
ವಿವಿಧ ಸ್ಪರ್ಧೆಗಳು...
ಬನ್ನಿರಿ... ನೋಡಿರಿ. ..
ಆನಂದಿಸಿರಿ

# ನವಿಲಣ್ಣನ ನೃತ್ಯ

ಇವತ್ತು ನವಿಲಣ್ಣನ ನೃತ್ಯವಿದೆ ನವಿಲಣ್ಣನ ಚಿತ್ರ ನೋಡಿರಿ. ಬಣ್ಣ ನೀಡಿ ಅಂದಗೊಳಿಸೋಣ. ಕೆಳಗೆ ನೀಡಿದವುಗಳ ಉತ್ತರ ಬರುವಂತಹ ಕೋಣೆಗಳಿಗೆ ಮಾತ್ರ ಬಣ್ಣ ನೀಡಿರಿ. ಕೋಣೆಗಳಲ್ಲಿ ನೀಡಿರುವ ಅದೇ ಬಣ್ಣವನ್ನು ಉತ್ತರಕ್ಕೂ ನೀಡಬೇಕು .ಬಿಳಿ ಬಣ್ಣದ ಕೋಣೆಯಲ್ಲಿರುವವುಗಳ ಉತ್ತರಗಳಿಗೆ ಬಣ್ಣ ನೀಡಬೇಕಾಗಿಲ್ಲ.

| | | | | | |
|---|---|---|---|---|---|
| 15 - 12 | 12 - 10 | 19 - 10 | 10 - 5 | 20 - 10 | 3 - 2 |
| 19 - 11 | 19 -12 | 12 - 1 | 8 - 2 | 8 - 4 | 15 - 3 |



## ಸ್ಟೇಜ್ ಶೋ

ನೃತ್ಯವನ್ನು ನೋಡಲು ಎಲ್ಲರೂ ಬಂದರು.




ಮಂಗಣ್ಣ ಮತ್ತು ಮರಿಮಂಗ ಒಟ್ಟಿಗೆ ಬಂದುವು.
ಇಬ್ಬರಿಗೆ ಟಿಕೆಟ್ ತೆಗೆದರು.
ಒಂದು 20 ರೂಪಾಯಿ ನೋಟು ನೀಡಿದರೆ ಬಾಕಿ ಎಷ್ಟು ರೂಪಾಯಿ ಸಿಗುವುದು?

| | | |
|---|---|---|
| ಮಂಗನಿಗೆ | 8 | ರೂಪಾಯಿ |
| ಮರಿಮಂಗ | 6 | ರೂಪಾಯಿ |
| ಒಟ್ಟು | | ರೂಪಾಯಿ |

### ಬಾಕಿ ಕಂಡುಹಿಡಿಯಲು

20 ರಿಂದ 14 ನ್ನು ಕಳೆಯಬೇಕು

20 – 14

20 ರಿಂದ 10 ಕಳೆದರೆ 10 .

10 ರಿಂದ 4 ಕಳೆದರೆ 6.

20 – 14 = 6

| | | | | |
|---|---|---|---|---|
| 20 | – 10 | = | 10 |
| 10 | – | 4 | = | 6 |
| 20 | – 14 | = | 6 |

**ಹೀಗೆಯೂ ಕಂಡು ಹಿಡಿಯಬಹುದು**

| | | | | |
|---|---|---|---|---|
| 10 | +10 | - | | |
| 10 | + | 4 | | |
| 0 | + | 6 | = | 6 |

**20 = 10 + 10**
**14 = 7 + 7**

10 ರಿಂದ 7
ಕಳೆದರೆ 3.
ಮುಂದಿನ 10 ರಿಂದ
7 ಕಳೆದರೆ 3

**20 – 14 = 3 + 3**
**= 6**



## ಹಾರುವ ಸ್ಪರ್ಧೆ

ಮೇಘಮಲೆಯಲ್ಲಿ ಹಾರುವ ಸ್ಪರ್ಧೆ.
ಸ್ಪರ್ಧೆಯಲ್ಲಿ 20 ಗಿಡುಗಗಳು ಇವೆ.

ಈ ಸಲ ಬಹುಮಾನ ಪಡೆಯಲೇ ಬೇಕು.



ಚೆಕ್ಕಿ ಗಿಡುಗನ ರೆಕ್ಕೆ ತುಂಡಾಗಿದೆ. ಅದು ಸ್ಪರ್ಧೆಯಲ್ಲಿ ಭಾಗವಹಿಸುವುದಿಲ್ಲ.

ಹಾಗಾದರೆ ಉಳಿದ 19 ಗಿಡುಗಗಳು ಭಾಗವಹಿಸುತ್ತವೆ.





ಇಂದು ಹಾರುವ ಸ್ಪರ್ಧೆ.

ಕಾಗೆಗಳು ಕುಟುಂಬ ಸಮೇತ ಬಂದಿವೆ.

29 ಕಾಗೆಗಳು ಇವೆ



ಹೆಚ್ಚು ಇರುವವುಗಳು ಕಾಗೆಗಳೋ ಗಿಡುಗಗಳೋ? [ ]



ಎಷ್ಟು ಹೆಚ್ಚು ? [ ]

29 ರಿಂದ 19 ಕಳೆಯಬೇಕು.

29 – 19

29 ರಿಂದ 9 ಕಳೆದರೆ 20

20 ರಿಂದ 10 ಕಳೆದರೆ 10

$29 - 9 = 20$

$20 - 10 = 10$

**ಹೀಗೆಯೂ ಬರೆಯಬಹುದು**

| | | | | |
|---|---|---|---|---|
| 20 | + | 9 | – | |
| 10 | + | 9 | | |
| 10 | + | 0 | = | 10 |



ಕಾಗೆಗಳು ಮರದ ಎರಡು ಗೆಲ್ಲುಗಳಲ್ಲಿ ಕುಳಿತಿವೆ.
ಮಂಗ ಎಣಿಕೆ ಮಾಡಿದನು. ಒಂದು ಗೆಲ್ಲಿನಲ್ಲಿ 18 ಕಾಗೆಗಳು ಇವೆ.

ಹಾಗಾದರೆ ಎರಡನೇ ಗೆಲ್ಲಿನಲ್ಲಿ ಎಷ್ಟು ಕಾಗೆಗಳು ಇವೆ? ☐

29 ರಿಂದ 18 ನ್ನು ಕಳೆಯಬೇಕು $\qquad$ 29 - 18

29 ರಿಂದ 10 ಕಳೆದರೆ 19.
19 ರಿಂದ 8 ಕಳೆದರೆ 11.

$29 - 10 = 19$
$19 - 8 = 11$

$29 - 18$
$20 - 10 = 10$
$9 - 8 = 1$
$29 - 18 = 11$

**ಹೀಗೆಯೂ ಬರೆಯಬಹುದು**

$20 + 9 -$
$10 + 8$
$10 + 1 = 11$

ನಾನು ಕಂಡುಹಿಡಿದದ್ದು



ಎರಡನೇ ಗೆಲ್ಲಿನಲ್ಲಿ ಇರುವವುಗಳಿಗಿಂತ ಒಂದನೇ ಗೆಲ್ಲಿನಲ್ಲಿ ಎಷ್ಟು ಕಾಗೆಗಳು ಹೆಚ್ಚು ಇವೆ? ☐

ಎಷ್ಟು ಹೆಚ್ಚು ಎಂದು ಲೆಕ್ಕ ಹಾಕಲು 18 ರಿಂದ 11 ಕಳೆಯಬೇಕು.

ನಾನು ಲೆಕ್ಕ ಹಾಕಿದ ರೀತಿ
18 ರಿಂದ 10 ಕಳೆದರೆ 8.
8 ರಿಂದ 1 ಕಳೆದರೆ 7

ಗೆಳತಿ ಕಂಡುಹಿಡಿದ ರೀತಿ.
18 ರಿಂದ 8 ಕಳೆದರೆ 10.
10 ರಿಂದ 3 ಕಳೆದರೆ 7

**ಇನ್ನೊಂದು ರೀತಿ**

$10 + 8 -$
$10 + 1$
$0 + 7 = 7$

ಸ್ಪರ್ಧೆಯಲ್ಲಿ ಭಾಗವಹಿಸಲು ಗಿಳಿಗಳು ಬಂದುವು.
ಕೆಳಗಿನ ಗೆಲ್ಲಿನಲ್ಲಿ 7 ಮಂದಿ ಕುಳಿತವು.
ಬಾಕಿ ಇರುವವುಗಳು ಮೇಲಿನ ಗೆಲ್ಲಿನಲ್ಲಿ ಕುಳಿತವು.




ಹಾಗಾದರೆ ಮೇಲಿನ ಗೆಲ್ಲಿನಲ್ಲಿ ಒಟ್ಟು ಎಷ್ಟು ಗಿಳಿಗಳು ಇವೆ? ☐

ಒಟ್ಟು ಎಷ್ಟು ಗಿಳಿಗಳು ಇದ್ದವು? ☐

ಗಿಳಿಗಳಿಗಿಂತ ಎಷ್ಟು ಕಾಗೆಗಳು ಹೆಚ್ಚು ಇವೆ? ☐

**ಹೇಗೆ ಕಂಡುಹಿಡಿದಿರಿ?**

## ಗುಬ್ಬಿಗಳು

ಸ್ಪರ್ಧೆಯಲ್ಲಿ ಭಾಗವಹಿಸಲು ಗುಬ್ಬಿಗಳು ಬಂದುವು.
ಒಟ್ಟು 35 ಗುಬ್ಬಿಗಳು.
ಅವುಗಳು 3 ಗೆಲ್ಲುಗಳಲ್ಲಿ ಕುಳಿತವು. ಒಂದನೇ ಗೆಲ್ಲಿನಲ್ಲಿ 15 ಗುಬ್ಬಿಗಳು.
ಎರಡನೇ ಗೆಲ್ಲಿನಲ್ಲಿ ಒಂದನೇ ಗೆಲ್ಲಿನಲ್ಲಿ ಇರುವುದಕ್ಕಿಂತಲೂ 6 ಗುಬ್ಬಿಗಳು ಕಡಿಮೆ ಇವೆ. ಮೂರನೇ ಗೆಲ್ಲಿನಲ್ಲಿ ಎಷ್ಟು ಗುಬ್ಬಿಗಳು ಇವೆ?

ಒಂದನೇ ಗೆಲ್ಲಿನಲ್ಲಿ 15

ಎರಡನೇ ಗೆಲ್ಲಿನಲ್ಲಿ 15 – 6 = ☐

ಎರಡು ಗೆಲ್ಲಿನಲ್ಲಿ ಒಟ್ಟು? ... + ... = [ ]

ಮೂರು ಗೆಲ್ಲಿನಲ್ಲಿ ಸೇರಿ ಒಟ್ಟು? [35]

ಮೂರನೇ ಗೆಲ್ಲಿನಲ್ಲಿ ಇರುವವುಗಳು 35 − .... = [ ]

ನೀವು ಕಂಡುಹಿಡಿದದ್ದು ಸರಿಯೇ? ಹೇಗೆ ಪರಿಶೀಲಿಸುವಿರಿ?

ನಾನು ಲೆಕ್ಕ ಹಾಕಿದ ರೀತಿ

ಕಾಗೆಗಳಿಗಿಂತ ಗುಬ್ಬಿಗಳು ಎಷ್ಟು ಹೆಚ್ಚು ಇವೆ?



ನಮ್ಮ ಸಂಖ್ಯೆ 35



29 ಕಾಗೆಗಳು ನಮ್ಮ ಗುಂಪಿನಲ್ಲಿವೆ.



ಗುಬ್ಬಿಗಳ ಸಂಖ್ಯೆಯಿಂದ ಕಾಗೆಗಳ ಸಂಖ್ಯೆಯನ್ನು ಕಳೆಯಬೇಕು.



35 ರಿಂದ 25 ಕಳೆದರೆ 10.

10 ರಿಂದ 4 ಕಳೆದರೆ 6.

**35 − 25 = 10**

**10 − 4 = 6**

**35 − 29 = 6**

35 − 29

| | | | | |
|---|---|---|---|---|
| 30 | + | 5 | − | |
| 20 | + | 9 | | |

35 ನ್ನು 20 + 15 ಎಂದು ಬರೆಯಬಹುದು.

| | | | | |
|---|---|---|---|---|
| 20 | + | 15 | − | |
| 20 | + | 9 | | |
| 0 | + | 6 | | |

29 ರೊಂದಿಗೆ ಎಷ್ಟನ್ನು
ಕೂಡಿಸಿದರೆ 35
ಸಿಗಬಹುದು ಎಂದು
ಕಂಡುಹಿಡಿದರೂ ಸಾಕು
ಅಲ್ಲವೇ.



29 + 1 = 30
30 + 5 = 35
1 + 5 = 6

ಗುಬ್ಬಿಗಳು ಮತ್ತು ಗಿಳಿಗಳ ಸಂಖ್ಯೆಗಳು
ತಮ್ಮೊಳಗಿರುವ ವ್ಯತ್ಯಾಸ ಎಷ್ಟು?

ಗುಬ್ಬಿಗಳ ಸಂಖ್ಯೆ 35. ಅದರಿಂದ ಗಿಳಿಗಳ ಸಂಖ್ಯೆಯನ್ನು ಕಳೆಯಬೇಕು.

35 − 16

| | | | |
|---|---|---|---|
| 30 | + | 5 | − |
| 10 | + | 6 | |

| | | | | | |
|---|---|---|---|---|---|
| 20 | + | 15 | − | | |
| 10 | + | 6 | | | |
| 10 | + | 9 | = | 19 | |

15 ರಿಂದ
6 ಕಳೆಯಲು
15 − 5 = 10
10 − 1 = 9

ಗುಬ್ಬಿ ಗಳಿಗಿಂತ ಗಿಡುಗಗಳ
ಸಂಖ್ಯೆ ಎಷ್ಟು ಕಡಿಮೆ?

35 − 19 = ☐

ಗುಬ್ಬಿಗಳು 35
ಹಾಗೂ ನಾವು
19.
ಅಲ್ಲವೇ?



ನಾನು ಕಂಡುಹಿಡಿದದ್ದು?

ಹೀಗೆಯೂ ಲೆಕ್ಕ ಹಾಕಬಹುದು.

**35 − 19**

35 ರಿಂದ 20
ಕಳೆದು 1 ಕೂಡಿಸಿದರೆ

35 − 20 = 15
15 + 1 = 16

## ಫೈನಲ್



ಫೈನಲ್ ಸ್ಪರ್ಧೆ ನೋಡಲು 42 ಹಕ್ಕಿಗಳು ಬಂದುವು.

ಅವುಗಳು 4 ಗೆಲ್ಲುಗಳಲ್ಲಿ ಕುಳಿತುಕೊಂಡವು .

ಒಂದನೇ ಗೆಲ್ಲಿನಲ್ಲಿ 10 ಹಕ್ಕಿಗಳು
ಎರಡನೇ ಗೆಲ್ಲಿನಲ್ಲಿ 9 ಹಕ್ಕಿಗಳು
ಮೂರನೇ ಗೆಲ್ಲಿನಲ್ಲಿ 10 ಹಕ್ಕಿಗಳು
ಉಳಿದವರು ನಾಲ್ಕನೇ ಗೆಲ್ಲಿನಲ್ಲಿ.

ನಾಲ್ಕನೇ ಗೆಲ್ಲಿನಲ್ಲಿ ಎಷ್ಟು ಹಕ್ಕಿಗಳು?

42 ರಿಂದ 30 ಕಳೆದರೆ 12 ಆಗಿದೆ .
ಹಾಗಾದರೆ 42 ರಿಂದ 29 ಕಳೆದರೆ 13.

### ಹೀಗೆಯೂ ಲೆಕ್ಕ ಹಾಕಬಹುದು

$$
\begin{array}{rcrcrl}
42 - 29 & = & 30 & + & 12 & - \\
 & & 20 & + & 9 & \\
\hline
 & & 10 & + & 3 & = 13
\end{array}
$$

ಬೇರೆ ಯಾವುದಾದರೂ ರೀತಿ ಇದೆಯೇ?

# ಬಾಣ ಎಸೆಯುವ ಆಟ

ಬಾಣ ಎಸೆದು ಆಟ ಆಡಲು ಎಲ್ಲರೂ
ಬಂದಿದ್ದಾರಲ್ಲವೇ? ಜಿಂಕೆ, ಮಂಗ, ನವಿಲು....




ಒಬ್ಬರಿಗೆ ಎರಡು ಬಾಣಗಳನ್ನು ಎಸೆಯಬಹುದು. ಸಿಗುವ ಸಂಖ್ಯೆಗಳು ತಮ್ಮೊಳಗಿನ ವ್ಯತ್ಯಾಸ ಹೊರಗಿನ ಕೋಣೆಯಲ್ಲಿರುವ ಯಾವುದಾದರೂ ಸಂಖ್ಯೆ ಆದರೆ ರೂ. 50 ಬಹುಮಾನ

ನನಗೆ
60 ಮತ್ತು 28
ಸಿಕ್ಕಿತು.



ನರಿಗೆ ಬಹುಮಾನ ಸಿಗಬಹುದೇ?

**ನಾನು ಲೆಕ್ಕ ಹಾಕಿದ ರೀತಿ**

ಇವರಲ್ಲಿ ಬಹುಮಾನ
ಸಿಕ್ಕಿದವರು ಯಾರೆಲ್ಲ?

| | | |
|---|---|---|
| ಕರಡಿ | 60 | 20 |
| ಮಂಗ | 28 | 16 |
| ನವಿಲು | 50 | 36 |
| ಜಿಂಕೆ | 36 | 28 |

**ಬಹುಮಾನ ಸಿಕ್ಕಿದವರು**

# ಹಣ್ಣಿನ ಅಂಗಡಿ



ಮಂಗವು 40 ರೂಪಾಯಿಗೆ ಬಾಳೆಹಣ್ಣನ್ನು ಮತ್ತು 45 ರೂಪಾಯಿಗೆ ಮಾವಿನ ಹಣ್ಣನ್ನು ಕೊಂಡುಕೊಂಡಿತು. ಎರಡು 50 ರೂಪಾಯಿ ನೋಟುಗಳನ್ನು ನೀಡಿತು.

ಬಾಕಿ ಎಷ್ಟು ಹಣ ಸಿಗುವುದು? ☐

ಕಂಡುಹಿಡಿದ ರೀತಿಯನ್ನು ಹೇಳಿರಿ.

ಬೇರೆ ಯಾವುದಾದರೂ ರೀತಿಯಲ್ಲಿ ಕಂಡುಹಿಡಿಯಬಹುದೇ?

ಆನೆಅಣ್ಣ ಮಡಲು ಮತ್ತು ಕಬ್ಬನ್ನು ಕೊಂಡುಕೊಂಡಿತು. ಎರಡೂ ಸೇರಿ 90 ರೂಪಾಯಿ ಆಯಿತು. ಕಬ್ಬಿನ ಬೆಲೆ 62 ರೂಪಾಯಿ.

ಮಡಲಿನ ಬೆಲೆ ಎಷ್ಟು ರೂಪಾಯಿ? ☐

ಹೇಗೆ ಕಂಡುಹಿಡಿದಿರಿ? ತರಗತಿಯಲ್ಲಿ ಹೇಳಿರಿ. ಬರೆಯಿರಿ.

## ಸರ್ಕಸ್

ನಾಲ್ಕು ಗಂಟೆಗೆ  ಸರ್ಕಸ್ ಪ್ರಾರಂಭವಾಗುವುದು .



7 ಮಂಗಗಳು ಸರ್ಕಸ್ ನೋಡಲು ಬಂದವು .

ಟಿಕೆಟು ದರ ಕುರ್ಚಿಗೆ 20 ರೂಪಾಯಿ ಮತ್ತು ಗ್ಯಾಲರಿಗೆ 10 ರೂಪಾಯಿ ಆಗಿದೆ.

ಎಲ್ಲರಿಗೂ ಕುರ್ಚಿಯ ಟಿಕೆಟ್ ತೆಗೆಯಲು ಗ್ಯಾಲರಿಯ ಟಿಕೆಟ್ ಗಿಂತ ಎಷ್ಟು ಹಣ ಹೆಚ್ಚು ನೀಡಬೇಕು?




ಕಂಡುಹಿಡಿದದ್ದು ಹೇಗೆ?

## ಎಷ್ಟು ಮೊಲಗಳು?

ಅರಣ್ಯೋತ್ಸವದಲ್ಲಿ ಭಾಗವಹಿಸಲು ಮೊಲಗಳು ಬಂದವು

ಒಟ್ಟು 85 ಮೊಲಗಳಿದ್ದವು .

ಅವುಗಳಲ್ಲಿ 23 ಮರಿ ಮೊಲಗಳು ಇದ್ದವು

ದೊಡ್ಡ ಮೊಲಗಳು ಎಷ್ಟಿವೆ?

ಒಟ್ಟು ಇರುವ ಮೊಲಗಳಲ್ಲಿ 38 ಹೆಣ್ಣು ಮೊಲಗಳಾಗಿವೆ.

ಗಂಡುಮೊಲಗಳ ಸಂಖ್ಯೆ ಎಷ್ಟು?

## ಬುಗರಿ ಹಣ್ಣು

ಬುಗರಿ ಹಣ್ಣನ್ನು ಬುಟ್ಟಿಯಲ್ಲಿ ಹಾಕುವ ಸ್ಪರ್ಧೆಯ ಫೈನಲ್ ನಲ್ಲಿ ಮೂರು ಮಂದಿ ಭಾಗವಹಿಸಿದ್ದರು. ಪ್ರತಿಯೊಬ್ಬರು ಬುಟ್ಟಿಯಲ್ಲಿ ಹಾಕಿದ ಬುಗರಿ ಹಣ್ಣುಗಳ ಸಂಖ್ಯೆಯನ್ನು ನೋಡಿರಿ.

ಪ್ರತಿಯೊಬ್ಬರು ಮೂರನೇ ಸಲ ಬುಟ್ಟಿಯಲ್ಲಿ ಹಾಕಿದ ಸಂಖ್ಯೆ ಯನ್ನು ಕಂಡುಹಿಡಿದು ಬರೆಯಿರಿ .

| ಹೆಸರು | ಒಟ್ಟು | ಒಂದನೆ ಸಲ | ಎರಡನೆ ಸಲ | ಮೂರನೆ ಸಲ |
|---|---|---|---|---|
| ಜಿಂಬು ಮಂಗ | 89 | 22 | 27 | |
| ಮಿಟ್ಟು ಮೊಲ | 72 | 24 | 29 | |
| ಮೋಟು ಅಳಿಲು | 90 | 23 | 28 | |







# 7

# ಗೆಳೆಯರ ಬಳಗ



# ಕಿತ್ತಳೆ ವಿತರಣೆ



ಟೀಚರು ಎಲ್ಲರಿಗೂ ಕಿತ್ತಳೆಗಳನ್ನು ತೆಗೆದುಕೊಂಡು ತರಗತಿಗೆ ಬಂದರು.
ಒಂದು ಭಾಗದ ಬೆಂಚಿನಲ್ಲಿ ಕುಳಿತಿರುವ 5 ಮಕ್ಕಳಿಗೆ
2 ರಂತೆ ಕಿತ್ತಳೆಗಳನ್ನು ನೀಡಿದರು.
ಒಟ್ಟು ಎಷ್ಟು ಕಿತ್ತಳೆಗಳನ್ನು ನೀಡಿದರು?

$2 + 2 + 2 + 2 + 2 = 10$

ಇನ್ನೊಂದು ಭಾಗದ ಬೆಂಚಿನಲ್ಲಿ ಕುಳಿತಿರುವ
4 ಮಕ್ಕಳಿಗೆ 2 ರಂತೆ ಕಿತ್ತಳೆಗಳನ್ನು ನೀಡಿದರು .
ಒಟ್ಟು ಎಷ್ಟು ಕಿತ್ತಳೆಗಳನ್ನು ನೀಡಿದರು?

$2 + 2 + 2 + 2 = 8$

ಎರಡೂ ಭಾಗದ ಬೆಂಚಿನಲ್ಲಿರುವ ಮಕ್ಕಳಿಗೆ ನೀಡಿದ ಒಟ್ಟು ಕಿತ್ತಳೆಗಳು ಎಷ್ಟು?

$$2 + 2 + 2 + 2 + 2 + 2 + 2 + 2 + 2 = 18$$

**ಒಂದು ಭಾಗದ ಬೆಂಚಿನಲ್ಲಿರುವ ಮಕ್ಕಳಿಗೆ ನೀಡಿದ್ದು**

$$2 + 2 + 2 + 2 + 2 = 10$$

2 ರಂತೆ 5 ಗುಂಪು

5 ಸಲ 2

ಇದನ್ನು 5 × 2 ಎಂದು ಬರೆಯಬಹುದು

**5 ಸಲ 2**

$$5 \times 2 = 10$$

**ಇನ್ನೊಂದು ಭಾಗದ ಬೆಂಚಿನಲ್ಲಿರುವ ಮಕ್ಕಳಿಗೆ ನೀಡಿದ್ದು**

$$2 + 2 + 2 + 2 = 8$$

2 ರಂತೆ 4 ಗುಂಪು

4 ಸಲ 2

ಇದನ್ನು 4 × 2 ಬರೆಯಬಹುದು

**4 ಸಲ 2**

$$4 \times 2 = 8$$

**ಎಲ್ಲರಿಗೂ ಸೇರಿ ನೀಡಿದ್ದು**

$$2 + 2 + 2 + 2 + 2 + 2 + 2 + 2 + 2 = 18$$

2 ರಂತೆ 9 ಗುಂಪು

9 ಸಲ 2

ಇದನ್ನು 9 × 2 ಬರೆಯಬಹುದು

**9 ಸಲ 2**

$$9 \times 2 = 18$$




ಪ್ರತಿ ಗುಂಪಿನಲ್ಲಿ ಎಷ್ಟು ಹಣ್ಣುಗಳಿವೆ? **2**

ಒಟ್ಟು ಎಷ್ಟು? 6 ಸಲ 2 $= 6 \times 2 = 12$



ಟೀಚರ್ 7 ಗಂಡು ಮಕ್ಕಳು ಹಾಗೂ 8 ಹೆಣ್ಣು ಮಕ್ಕಳಿಗೆ 2 ರಂತೆ ಕಿತ್ತಳೆಗಳನ್ನು ನೀಡಿದರು.

ಗಂಡು ಮಕ್ಕಳಿಗೆ ಒಟ್ಟು ಎಷ್ಟು ನೀಡಿದರು? $7 \times 2 = 14$

ಹೆಣ್ಣು ಮಕ್ಕಳಿಗೆ ಒಟ್ಟು ಎಷ್ಟು ನೀಡಿದರು? $8 \times 2 = 16$

## ಬಹುಮಾನ ವಿತರಣೆ

ಟೀಚರ್ ಎಲ್ಲರಿಗೂ ನೀಡಲು
ಬಹುಮಾನಗಳನ್ನು ತಂದು ಇಟ್ಟಿದ್ದಾರೆ.



ತುಂಬಾ ಪೆಟ್ಟಿಗೆಗಳು ಇವೆ. ಪ್ರತಿ ಪೆಟ್ಟಿಗೆಯಲ್ಲೂ 2 ಕಪ್ ಗಳಿವೆ.
ನಿಮ ಎಣಿಕೆ ಮಾಡಿದಳು. 10 ಪೆಟ್ಟಿಗೆಗಳು ಇವೆ.

10 ಪೆಟ್ಟಿಗೆಗಳಲ್ಲಿ ಸೇರಿ ಒಟ್ಟು ಎಷ್ಟು ಕಪ್ ಗಳು ಇರಬಹುದು?
10 ಸಲ 2 ಸೇರಿದರೆ

$2 + 2 + 2 + 2 + 2 + 2 + 2 + 2 + 2 + 2$ 

| $10 \times 2 =$ .......... |
|---|



3 ಪೆಟ್ಟಿಗೆಗಳಲ್ಲಿ 2 ಕಪ್ ಗಳಂತೆ.

3 ಸಲ 2 = $3 \times 2$ = .......



2 ಪೆಟ್ಟಿಗೆಗಳಲ್ಲಿ 2 ಕಪ್ ಗಳಂತೆ.

2 ಸಲ 2 = ....... × ....... = .......



1 ಪೆಟ್ಟಿಗೆಯಲ್ಲಿ 2 ಕಪ್.

1 ಸಲ 2 = ....... × 2 = .......

ಮಾದರಿಯಂತೆ ಪೂರ್ತಿಗೊಳಿಸಿರಿ.

| | | | | |
|---|---|---|---|---|
| 3 ಸಲ 2 | 2 + 2 + 2 | $3 \times 2$ | = | 6 |
| 4 ಸಲ 2 | ............... | ............ | = | ...... |
| 6 ಸಲ 2 | ............... | ............ | = | ...... |
| 2 ಸಲ 2 | ............... | ............ | = | ...... |

ಇವುಗಳನ್ನು ವಿವರಿಸಿರಿ.

| | | | | | |
|---|---|---|---|---|---|
| $8 \times 2$ | = | 2+2+2+2+2+2+2+2 | 8 ಸಲ 2 | = | 16 |
| $7 \times 2$ | = | .............................. | ...................... | = | ...... |
| $9 \times 2$ | = | .............................. | ...................... | = | ...... |
| $5 \times 2$ | = | .............................. | ...................... | = | ...... |
| $10 \times 2$ | = | .............................. | ...................... | = | ...... |

## ನಾಣ್ಯದ ಆಟ

ನಾಣ್ಯದ ಆಟ ಆಡಲು ಟೀಚರ್ ಎಲ್ಲರಿಗೂ 2 ರೂಪಾಯಿ ನಾಣ್ಯಗಳನ್ನು ನೀಡಿದರು. ಪ್ರತಿಯೊಬ್ಬರಿಗೂ ಸಿಕ್ಕಿದ ನಾಣ್ಯಗಳ ಸಂಖ್ಯೆಯನ್ನು ಪಟ್ಟಿಯಲ್ಲಿ ನೋಡಿರಿ.

ಪ್ರತಿಯೊಬ್ಬರಿಗೆ ಸಿಕ್ಕಿದ ಹಣ ಎಷ್ಟು ಎಂದು ಲೆಕ್ಕಹಾಕಿ ಬರೆಯಿರಿ.

| ಹೆಸರು | 2 ರೂಪಾಯಿ ನಾಣ್ಯಗಳ ಸಂಖ್ಯೆ | ಒಟ್ಟು ರೂಪಾಯಿ |
|---|---|---|
| ಆದಿ | 6 | $6 \times 2 = 12$ ರೂಪಾಯಿ |
| ಶ್ರೀನಿ | 3 | |
| ಅನು | 8 | |
| ಸಾಯಿ | 5 | |
| ಇವಾನ್ | 4 | |

## ಸೈಕಲ್ ಪದ್ಯ

ಮಕ್ಕಳು ಚಕ್ರಗಳನ್ನು ಎಣಿಕೆ ಮಾಡತೊಡಗಿದರು.

ಸೈಕಲ್ ಒಂದು ಚಕ್ರಗಳು ಎರಡು
ಸೈಕಲ್ ಎರಡು ಚಕ್ರಗಳು ನಾಲ್ಕು
ಸೈಕಲ್ ಮೂರು ಚಕ್ರಗಳು ಆರು
ಸೈಕಲ್ ನಾಲ್ಕು ಚಕ್ರಗಳು ಎಂಟು
ಸೈಕಲ್ ಐದು ಚಕ್ರಗಳು ಹತ್ತು
..................................................
..................................................
..................................................



## ಚೆಂಡಾಟ




ಗುಂಪು ಮಾಡುವ ಆಟ ಪ್ರಾರಂಭವಾಯಿತು.
ಪ್ರತಿ ಗುಂಪು ಅವರಿಗೆ ಸಿಕ್ಕಿದ ಚೆಂಡುಗಳನ್ನು ಟೀಚರ್ ಹೇಳಿದಷ್ಟು ಸಂಖ್ಯೆಗಳಿರುವ ಗುಂಪುಗಳಾಗಿ ಇರಿಸಬೇಕು.

“5 ರಂತೆ.” ಟೀಚರ್ ಹೇಳಿದರು.

ಒಂದನೇ ಗುಂಪಿನ ಮಕ್ಕಳು ಗುಂಪು ಮಾಡಿ ಇಟ್ಟಿರುವುದನ್ನು ನೋಡಿರಿ.



ಒಂದನೇ ಗುಂಪು ಎಷ್ಟು ಗುಂಪು ಮಾಡಿತು? ☐

ಪ್ರತಿ ಗುಂಪಿನಲ್ಲಿ ಎಷ್ಟು ಚೆಂಡುಗಳು? ☐

ಒಟ್ಟು ಚೆಂಡುಗಳು ಎಷ್ಟು?

5 + 5 + 5 + 5 + 5 + 5 = 30

5 ರಂತೆ 6 ಗುಂಪುಗಳು.

6 ಸಲ 5 ಸೇರಿದರೆ 30.

**6 × 5 = 30**

ಎರಡನೇ ಗುಂಪಿಗೆ ಸಿಕ್ಕಿದವುಗಳನ್ನು ನೋಡಿರಿ.



5 ರಂತೆ 3 ಗುಂಪುಗಳು.

3 ಸಲ 5 ಸೇರಿದರೆ 15.

5 + 5 + 5 = 15

**3 × 5 = 15**

ಮೂರನೆಯ ಗುಂಪಿಗೆ ಸಿಕ್ಕಿದವುಗಳನ್ನು ನೋಡಿರಿ.

5 + 5 + 5 + 5 + 5 + 5 + 5 + 5 = 40



5 ರಂತೆ 8 ಗುಂಪುಗಳು.

8 ಸಲ 5 ಸೇರಿದರೆ 40.

**8 × 5 = 40**

ನಾಲ್ಕನೇ ಗುಂಪು 5 ರಂತೆ 10 ಗುಂಪುಗಳನ್ನು ಮಾಡಿದರು.

ಒಟ್ಟು ಎಷ್ಟು ಚೆಂಡುಗಳಿವೆ?

10 ಸಲ 5

.. × ... = ...

ಒಂದು ಮತ್ತು ಎರಡನೇ ಗುಂಪುಗಳಿಗೆ ಒಟ್ಟು ಎಷ್ಟು ಸಿಕ್ಕಿತು?

ಒಂದನೇ ಗುಂಪು $6 \times 5 = 30$

ಎರಡನೇ ಗುಂಪು $3 \times 5 = 15$

ಎರಡೂ ಗುಂಪುಗಳಿಗೆ ಒಟ್ಟು ಸಿಕ್ಕಿದುದು **$30 + 15 = 45$**

ಒಟ್ಟು 5 ರಂತೆ 9 ಗುಂಪುಗಳು.

**$9 \times 5 = 45$**

## ಸ್ಕೂಲ್ ಬಸ್

ಶಾಲೆ ಬಿಟ್ಟಿತು. ಬಸ್ಸಿನಲ್ಲಿ ಹತ್ತಲು ಮಕ್ಕಳು ಗುಂಪುಗಳಾಗಿ ನಿಂತರು.




| ಎಷ್ಟು ಗುಂಪುಗಳು ಇವೆ? | ಒಂದು ಗುಂಪಿನಲ್ಲಿ ಎಷ್ಟು ಮಕ್ಕಳು ಇದ್ದಾರೆ? | ಒಟ್ಟು ಎಷ್ಟು ಮಕ್ಕಳು? |
| --- | --- | --- |
| | | |

ಐದು ಗುಂಪುಗಳು ಮೊದಲು ಬಸ್ಸಿಗೆ ಹತ್ತಿದರು.

ಎಷ್ಟು ಮಂದಿ ಹತ್ತಿದರು?

5 ಸಲ 5 .... × ... = .....

ಇನ್ನು ಎಷ್ಟು ಮಂದಿ ಬಾಕಿ ಇದ್ದಾರೆ? .... × ... = .....





ಒಂದು ದಾಸವಾಳ ಹೂವಿಗೆ ಐದು ದಳಗಳು
ಎರಡು ದಾಸವಾಳ ಹೂವಿಗೆ ಹತ್ತು ದಳಗಳು
ಮೂರು ದಾಸವಾಳ ಹೂವಿಗೆ ಹದಿನೈದು ದಳಗಳು
ನಾಲ್ಕು ದಾಸವಾಳ ಹೂವಿಗೆ ಇಪ್ಪತ್ತು ದಳಗಳು
ಐದು ದಾಸವಾಳ ಹೂವಿಗೆ ಇಪ್ಪತ್ತೈದು ದಳಗಳು

.........................................................................

.........................................................................

.........................................................................

## ನಾವು ಆಟ ಆಡೋಣ

ಟೀಚರ್ ಎಲ್ಲರಿಗೂ ಆಟದ ನಾಣ್ಯಗಳನ್ನು ನೀಡಿದರು.



ಈ ಸಲ ಐದು ರೂಪಾಯಿ ನಾಣ್ಯಗಳನ್ನು ನೀಡಿದರು

ನಿಯಳಿಗೆ 6 ನಾಣ್ಯಗಳು ಸಿಕ್ಕಿದವು. ಸಿಯಾಳಿಗೆ 3 ನಾಣ್ಯಗಳು

ಇಬ್ಬರಿಗೂ ಸೇರಿ ಎಷ್ಟು ರೂಪಾಯಿಯ ಆಟದ ನಾಣ್ಯಗಳು ಸಿಕ್ಕಿದವು?

ಇನ್ನೂ ಕೆಲವರಿಗೆ ಸಿಕ್ಕಿದ ನಾಣ್ಯಗಳ ಸಂಖ್ಯೆಯನ್ನು ನೋಡಿರಿ.
ಉಳಿದ ಕೋಣೆಗಳನ್ನು ಪೂರ್ತಿಗೊಳಿಸಿರಿ.

| ಹೆಸರು | ಸಂಖ್ಯೆ | ಒಟ್ಟು ಹಣ |
|---|---|---|
| ರಾಹುಲ್ | 4 | $4 \times 5 = 20$ |
| ಅಫ್ಸಲ್ | 5 | |
| ಜೋನಿ | 3 | |
| ಆದಿರಾ | 2 | |
| ನವಮಿ | 1 | |
| ಗೋಪಿಕ | 7 | |

ರಾಹುಲ್ ಮತ್ತು ಆದಿರಳಿಗೆ ಸೇರಿ ಒಟ್ಟು ಎಷ್ಟು ರೂಪಾಯಿಯ ಆಟದ ನಾಣ್ಯಗಳು ಸಿಕ್ಕಿದವು?

ಜೋನಿ ಮತ್ತು ಗೋಪಿಕಳಿಗೋ?

## ತಿಂಡಿಯ ಹಿರಿಮೆ

ಶಾಲೆಯಲ್ಲಿ ನಡೆಯುವ ತಿಂಡಿ ಉತ್ಸವಕ್ಕೆ ನಿವ್ಯ ಮತ್ತು ಹಯಾಳ ಮನೆಯಲ್ಲಿ ಉಣ್ಣಿ ಅಪ್ಪ ಮಾಡುತ್ತಿದ್ದಾರೆ.



ರೀನಾ 3 ಪ್ಯಾಕೆಟ್ ಉಣ್ಣಿ ಅಪ್ಪವನ್ನು ಖರೀದಿಸಿದಳು.
3 ಪ್ಯಾಕೆಟ್ ಗಳಲ್ಲಿ ಇರುವ ಒಟ್ಟು ಉಣ್ಣಿ ಅಪ್ಪಗಳು ಎಷ್ಟು?

10 ರಂತೆ 3 ಪ್ಯಾಕೇಟ್

10 + 10 + 10

3 ಸಲ 10

= 3 × 10

= 30

**3 ಸಲ 10**
**30 ಆಗಿದೆ ಅಲ್ಲವೇ**

ಶಿವನು 4 ಪ್ಯಾಕೆಟ್ ಉಣ್ಣಿ ಅಪ್ಪವನ್ನು ಖರೀದಿಸಿದನು.
ಒಟ್ಟು ಉಣ್ಣಿ ಅಪ್ಪಗಳ ಸಂಖ್ಯೆ ಎಷ್ಟು?

10 + 10 + 10 + 10

............ ಸಲ ............

............ × ............ = ............

ರೀನಾ ಮತ್ತು ಶಿವನು ಸೇರಿ
ಖರೀದಿಸಿದ ಒಟ್ಟು ಉಣ್ಣಿ ಅಪ್ಪಗಳು ಎಷ್ಟು?

**10 + 10 + 10** + **10 + 10 + 10 + 10**

3 × 10 + 4 × 10 = 7 × 10

30 + 40 = 70

ಸನಾ 6 ಪ್ಯಾಕೆಟ್ ಉಣ್ಣಿ ಅಪ್ಪವನ್ನು ಖರೀದಿಸಿದಳು.

ಸನಾ ಖರೀದಿಸಿದ
ಒಟ್ಟು ಅಪ್ಪಗಳ ಸಂಖ್ಯೆ ಎಷ್ಟು? ☐

## ಸಂಖ್ಯೆ ಬರೆಯುವ

| | |
|---|---|
| 5 ಪ್ಯಾಕೆಟ್ ಗಳು | |
| 9 ಪ್ಯಾಕೆಟ್ ಗಳು | |
| 8 ಪ್ಯಾಕೆಟ್ ಗಳು | |
| 1 ಪ್ಯಾಕೆಟ್ | |

## ಪೂರ್ತಿಗೊಳಿಸಿರಿ

| | | | | |
|---|---|---|---|---|
| 1 | × | 10 | = | 10 |
| 2 | × | ..... | = | 20 |
| ..... | × | ..... | = | 30 |
| ..... | × | ..... | = | ..... |
| ..... | × | ..... | = | ..... |
| ..... | × | ..... | = | ..... |
| ..... | × | 10 | = | 70 |
| ..... | × | ..... | = | ..... |
| ..... | × | ..... | = | ..... |
| ..... | × | ..... | = | ..... |

## ಬಳೆ ಮಾಲೆ ಮತ್ತು ಜಿಮಿಕಿಗಳು

ತಾಯಿಯೊಂದಿಗೆ ಹಯ, ನಿವ್ಯ ಮತ್ತು ಗೆಳೆಯರು ಅಂಗಡಿಗೆ ಹೋದರು.
ಅವರಿಗೆ ಬಳೆ, ಜಿಮಿಕಿ ಮತ್ತು ಮಾಲೆ ಬೇಕು.
ತಾಯಿಯ ಜೊತೆ ಅವರು ಪ್ರತಿಯೊಂದನ್ನೂ ಆಯ್ಕೆ ಮಾಡತೊಡಗಿದರು.



**ಎಷ್ಟು ರೂಪಾಯಿ?**

ನಿವ್ಯ 6 ಬಳೆಗಳನ್ನು ಮತ್ತು ಹಯ 4 ಬಳೆಗಳನ್ನು ತೆಗೆದರು.
ಒಟ್ಟು ಎಷ್ಟು ರೂಪಾಯಿ ನೀಡಬೇಕು?

ಬೇರೆ ಯಾವುದಾದರೂ ರೀತಿಯಲ್ಲಿ ಲೆಕ್ಕ ಹಾಕಬಹುದೇ?

**ಬಾಕಿ ಎಷ್ಟು?**

ನಿವ್ಯ 4 ಜೊತೆ ಜಿಮಿಕಿ ಮತ್ತು ಹಯ 5 ಜತೆ ಜಿಮಿಕಿ ಖರೀದಿಸಿದರು.

ಅವರು 100 ರೂಪಾಯಿಯನ್ನು ಅಂಗಡಿಯವನಿಗೆ
ನೀಡಿದರೆ ಬಾಕಿ ಸಿಗುವ ಹಣವೆಷ್ಟು?

ಹೇಗೆ ಕಂಡುಹಿಡಿದಿರಿ?

ಉಳಿದವರು ಖರೀದಿಸಿದ ಸಾಮಗ್ರಿಗಳನ್ನು ನೋಡಿರಿ.
ಪ್ರತಿಯೊಬ್ಬರು ನೀಡಬೇಕಾದ ಹಣವನ್ನು ಕೆಳಗೆ ನೀಡಿದವುಗಳಿಂದ ಕಂಡುಹಿಡಿದು ಬರೆಯಿರಿ.

| | |
|---|---|
| ರೀನಾ 5 ಜೊತೆ ಜಿಮಿಕಿ | $5 \times 10 =$ ...... |
| ಲೆನ 4 ಬಳೆ | ..... × ... = ...... |
| ರೋಸಿ 8 ಜೊತೆ ಜಿಮಿಕಿ | ..... × ... = ...... |
| ಸನಾ 3 ಮಾಲೆ | ..... × ... = ...... |
| ಶಿವ 7 ಬಳೆ | ..... × ... = ...... |

**40** **50** **80** **70** **30**

ಒಂದು ಏಡಿಗೆ ಕಾಲುಗಳು ಹತ್ತು
ಎರಡು ಏಡಿಗಳಿಗೆ ಕಾಲುಗಳು ಇಪ್ಪತ್ತು
ಮೂರು ಏಡಿಗಳಿಗೆ ಕಾಲುಗಳು ಮೂವತ್ತು
ನಾಲ್ಕು ಏಡಿಗೆ ಕಾಲುಗಳು ನಲುವತ್ತು
ಐದು ಏಡಿಗೆ ಕಾಲುಗಳು ಐವತ್ತು
..........................................................
..........................................................
..........................................................

## ಹಾಯ್ ಅಪ್ಪ ಬಂದರು

ಸಂಜೆ ನಿವ್ಯ ಮತ್ತು ಹಯ ತಂದೆಯನ್ನು ಕಾಯುತ್ತಾ ಕುಳಿತಿದ್ದರು.
ಅದೋ... ಗಾಡಿಯ ಶಬ್ದ... ಇಬ್ಬರೂ ಅಂಗಳಕ್ಕೆ ಓಡಿದರು...
ತಂದ ತಿಂಡಿಯ ಪೊಟ್ಟಣವನ್ನು ತಂದೆ ಅವರಿಗೆ ನೀಡಿದರು.




ತಂದೆ 8 ಲಾಡುಗಳನ್ನು ತಂದಿದ್ದರು. ತಂದೆ,ತಾಯಿ, ನಿವ್ಯ ಮತ್ತು ಹಯಾಳಿಗೆ ಸಮಾನವಾಗಿ ಹಂಚಿದರು.

ಪ್ರತಿಯೊಬ್ಬರಿಗೆ ಎಷ್ಟರಂತೆ ಸಿಕ್ಕಿತು? [ ]

## ಜೊತೆ ಆಗುವ... ಆಡುವ...

ಪ್ರತ್ಯುಷ್ ಮತ್ತು ಮಾಲಿಕ್ ರಜಾದಿನವಾದುದರಿಂದ ನಿವ್ಯ ಮತ್ತು ಹಯಾಳ ಮನೆಗೆ ಆಟ ಆಡಲು ಬಂದರು .



ಎರಡು ತಂಡವಾಗಿ ಆಟ ಆಡುವ ನಿವ್ಯ ಹೇಳಿದಳು.
ಒಂದು ಗೆರೆಯ ಎರಡು ಬದಿಗಳಲ್ಲಿ ಸಮಾನ ಸಂಖ್ಯೆಯಲ್ಲಿ ನಿಂತರು.

ಒಂದು ತಂಡದಲ್ಲಿ ಎಷ್ಟು ಮಂದಿ? ☐

ಅದೋ... ನಿಷಿ ಮತ್ತು ಸನು ಬರುತ್ತಿದ್ದಾರೆ.

ಈಗ ಒಟ್ಟು ಎಷ್ಟು ಮಂದಿ ಆದೆವು? ☐

ಅವರು ಒಂದೊಂದು ತಂಡದಲ್ಲಿ ಸೇರಿದರು.

ಈಗ ಪ್ರತಿ ತಂಡದಲ್ಲಿ ಎಷ್ಟು ಮಂದಿ? ☐

4 ಮಂದಿ 2 ತಂಡ ಆದಾಗ ಒಂದು ತಂಡದಲ್ಲಿ 2 ಮಂದಿ
6 ಮಂದಿ 2 ತಂಡ ಆದಾಗ ಒಂದು ತಂಡದಲ್ಲಿ 3 ಮಂದಿ

8 ಮಂದಿ 2 ತಂಡದಲ್ಲಿ ಆದಾಗ ಒಂದು ತಂಡದಲ್ಲಿ ಎಷ್ಟು ಮಂದಿ? ☐

# ಟೋಕನ್ ಆಟ

2, 5, 10 ಎಂಬೀ ಪೋಯಿಂಟ್ ಗಳನ್ನು ಬರೆದ ಟೋಕನ್ ಗಳು ಇವೆ. ಒಬ್ಬರಿಗೆ 10 ಟೋಕನ್ ಗಳಂತೆ ನೀಡಲಾಯಿತು. ಅತ್ಯಂತ ಹೆಚ್ಚು ಪೋಯಿಂಟ್ ಸಿಕ್ಕಿದವರು ಜಯಗಳಿಸುವರು. ಕೆಲವರಿಗೆ ಸಿಕ್ಕಿದ ಟೋಕನ್ ಗಳ ಸಂಖ್ಯೆಯನ್ನು ನೋಡಿರಿ.

ಸಿಕ್ಕಿದ ಪೋಯಿಂಟ್ ಗಳನ್ನು ಲೆಕ್ಕ ಹಾಕಿರಿ.

| ಹೆಸರು | 2 | 5 | 10 | ಒಟ್ಟು ಪೋಯಿಂಟ್ | |
|---|---|---|---|---|---|
| ಕನಿ | 4 | 4 | 2 | $4 \times 2 = 8$<br>$4 \times 5 = 20$<br>$2 \times 10 = 20$ | 48 |
| ತನು | 8 | 1 | 1 | 8 × 2 = .....<br>..... × 5 = .....<br>..... × 10 = ..... | |
| ಅಮಲ್ | 4 | 2 | 4 | ..... × 2 = .....<br>..... × 5 = .....<br>..... × 10 = ..... | |
| ನಿಳ | 1 | 3 | 6 | ..... × 2 = .....<br>..... × 5 = .....<br>..... × 10 = ..... | |

ಇದರಲ್ಲಿ ಹೆಚ್ಚು ಪೋಯಿಂಟ್ ಯಾರಿಗೆ ಸಿಕ್ಕಿತು? [ ]

ಅತ್ಯಂತ ಕಡಿಮೆಯೋ? [ ]

ಈ ಆಟದಲ್ಲಿ ಒಬ್ಬರಿಗೆ ಲಭಿಸಬಹುದಾದ ಗರಿಷ್ಠ ಪೋಯಿಂಟ್ ಎಷ್ಟು? [ ]



# 8

# ಅಳೆದು ನೋಡುವ



## ನೀಬಳ ಮನೆ




ಇದು ನೀಬ ನಿರ್ಮಿಸಿದ ಮನೆಯ ಚಿತ್ರವಿದು.



ನೀಬ ಉಪಯೋಗಿಸಿದ ಹಿಡಿಸೂಡಿ ಕಡ್ಡಿಗಳು ಎಷ್ಟು? [ ]

ಇದರಲ್ಲಿ ಉದ್ದ ಹೆಚ್ಚಿರುವ ಮತ್ತು ಉದ್ದ ಕಡಿಮೆ
ಇರುವ ಕಡ್ಡಿಗಳನ್ನು ಬಳಸಿದ್ದಾರೆ.

ನಾವು ಒಂದು ಮನೆ ನಿರ್ಮಿಸುವ

ಸಮಾನ ಉದ್ದದ ಕಡ್ಡಿಗಳೂ ಬೇಕಲ್ಲವೇ?

ಒಂದೇ ಅಳತೆಯಲ್ಲಿ ತುಂಡರಿಸುವುದು ಹೇಗೆ?
ಗೆಳೆಯರೊಂದಿಗೆ ಚರ್ಚಿಸಿರಿ.




ಗೋಡೆಗಾಗಿ ತೆಗೆದ
2 ಕಡ್ಡಿಗಳನ್ನು ನೋಡಿರಿ.



ದೊಡ್ಡದಕ್ಕೆ ✓ ಹಾಕಿರಿ

✓ ದೊಡ್ಡದಕ್ಕೆ ಹಾಕಿರುವುದು ದೊಡ್ಡ ಕಡ್ಡಿ ತಾನೆ?
ಹೇಗೆ ಕಂಡು ಕಂಡುಹಿಡಿಯಬಹುದು?
ಎರಡು ಕಡ್ಡಿಗಳ ಉದ್ದವನ್ನು ಒಂದೇ ರೀತಿ ಮಾಡಲು ಏನು ಮಾಡಬೇಕು?




ಇದೇ ರೀತಿ ಮನೆಗೆ ಬೇಕಾದ
ಇತರ ಕಡ್ಡಿಗಳನ್ನು ತುಂಡರಿಸಿ
ಅಂಟಿಸಿ ಸುಂದರವಾದ ಮನೆ ನಿರ್ಮಿಸಿರಿ

## ಸುಲಭದ ದಾರಿ ಕಂಡು ಹಿಡಿಯಬಹುದೇ?

ಮರುದಿನ ಚಿಕ್ಕಿರುವೆಯನ್ನು ಗೂಡಿಗೆ ತಲಪಿಸುವುದು ಹೇಗೆ ಎಂಬ ಒಂದು ಸಮಸ್ಯೆಯೊಂದಿಗೆ ನೀಬ ತರಗತಿಗೆ ಬಂದಳು.

ಬೆಂಕಿಕಡ್ಡಿಗಳ ಮೂಲಕ ಸಾಗಿ ಚಿಕ್ಕಿರುವೆಗೆ ಮನೆಗೆ ತಲುಪಬೇಕು.



ಚಿಕ್ಕಿರುವೆಗೆ ಮನೆಗೆ ತಲುಪಲು ಹಲವು ದಾರಿಗಳು ಇವೆಯಲ್ಲವೇ?
ಪ್ರತಿಯೊಂದು ದಾರಿಗೆ ಎಷ್ಟು ಬೆಂಕಿ ಕಡ್ಡಿಗಳು ಬೇಕು?
ಕೋಣೆಯಲ್ಲಿ ಬರೆಯಿರಿ.

| ದಾರಿ | ಮನೆ ಇರುವ ದೂರ |
|---|---|
| 1 | ........................ ಬೆಂಕಿ ಕಡ್ಡಿಗಳು |
| 2 | ........................ ಬೆಂಕಿ ಕಡ್ಡಿಗಳು |
| 3 | ........................ ಬೆಂಕಿ ಕಡ್ಡಿಗಳು |
| 4 | ........................ ಬೆಂಕಿ ಕಡ್ಡಿಗಳು |
| 5 | ........................ ಬೆಂಕಿ ಕಡ್ಡಿಗಳು |
| 6 | ........................ ಬೆಂಕಿ ಕಡ್ಡಿಗಳು |
| 7 | ........................ ಬೆಂಕಿ ಕಡ್ಡಿಗಳು |
| 8 | ........................ ಬೆಂಕಿ ಕಡ್ಡಿಗಳು |
| 9 | ........................ ಬೆಂಕಿ ಕಡ್ಡಿಗಳು |

ಅತಿ ಕಡಿಮೆ ದೂರದ ದಾರಿಯಲ್ಲಿ ಎಷ್ಟು ಬೆಂಕಿಕಡ್ಡಿಗಳು ಇವೆ?

## ಉದ್ದ ಅಳೆಯುವ




ನಿಮ್ಮ ತರಗತಿಯ ಬೆಂಚಿನ ಉದ್ದ ಮತ್ತು ಡೆಸ್ಕಿನ ಉದ್ದವನ್ನು ಕಡ್ಡಿಯ ಸಹಾಯದಿಂದ ಅಳೆದು ನೋಡಿರಿ...

ನಾನು ಕಂಡುಹಿಡಿದದ್ದು

ಡೆಸ್ಕಿನ ಉದ್ದ ___ ಕಡ್ಡಿ

ಬೆಂಚಿನ ಉದ್ದ ___ ಕಡ್ಡಿ

## ಮೇಜಿನ ಉದ್ದ ಅಳೆಯುವ

ತರಗತಿಯಲ್ಲಿರುವ ಮೇಜಿನ ಉದ್ದವನ್ನು ಬೆರಳಿನಿಂದ ಅಳೆಯೋಣವೇ?



| | ನಾನು ಅಳೆದದ್ದು | ಗೆಳೆಯ ಅಳೆದದ್ದು | ಟೀಚರ್ ಅಳೆದದ್ದು |
|---|---|---|---|
| ಮೇಜಿನ ಉದ್ದ | .............. ಗೇಣು | .............. ಗೇಣು | .............. ಗೇಣು |
| ಮೇಜಿನ ಎತ್ತರ | .............. ಗೇಣು | .............. ಗೇಣು | .............. ಗೇಣು |

ಟೀಚರಿಗೆ ಸಿಕ್ಕಿದುದೂ ಮತ್ತು ನಿಮಗೆ ಸಿಕ್ಕಿದುದು ಒಂದೇ  ಅಳತೆ ಆಗಿದೆಯೇ?

ನಾನು ಕಂಡುಹಿಡಿದದ್ದು

## ಎತ್ತರ ನೋಡುವ



| ತಾಯಿಯ ಎತ್ತರ | ತಂದೆ ಎತ್ತರ | ನೀಬಳ ಎತ್ತರ | ಸಹೋದರನ ಎತ್ತರ |
|---|---|---|---|
| 13 ಇಟ್ಟಿಗೆಗಳು | | | |

ಕೆಳಗೆ ನೀಡಿರುವ ವಸ್ತುಗಳಲ್ಲಿ ಅತ್ಯಂತ ಉದ್ದ ಹೆಚ್ಚಿರುವುದಕ್ಕೆ (1) ಅದಕ್ಕಿಂತ ಸಣ್ಣದು (2) ಅದಕ್ಕಿಂತ ಸಣ್ಣದು (3) ಹೀಗೆ ಕ್ರಮವಾಗಿ ನಂಬ್ರವನ್ನು ಉರುಟಿನೊಳಗೆ ಬರೆಯಿರಿ.



○ ಪೆನ್ಸಿಲ್ ..........................ಕೋಣೆಗಳು

○ ಚಮಚ ..........................ಕೋಣೆಗಳು

○ ರಬ್ಬರ್ ..........................ಕೋಣೆಗಳು

○ ಪೆನ್ನು ..........................ಕೋಣೆಗಳು

○ ಸೂಜಿ ..........................ಕೋಣೆಗಳು

ನೀಬ ತನ್ನ ಸಹೋದರನ ಎತ್ತರವನ್ನು ಅಳೆದಿರುವುದನ್ನು ನೋಡಿರಿ.




ಪೆನ್ಸಿಲ್ ಉಪಯೋಗಿಸಿ ನಿಮ್ಮ ಹಾಗೂ ಗೆಳೆಯನ ಎತ್ತರ ಕಂಡುಹಿಡಿಯಿರಿ.

ಇದೇ ರೀತಿ ಕುರ್ಚಿಯ ಎತ್ತರ ಮತ್ತು ಪುಸ್ತಕದ ಉದ್ದವನ್ನು ಕಂಡುಹಿಡಿಯಿರಿ.

ಕುರ್ಚಿಯ ಎತ್ತರ ..................................ಪೆನ್ಸಿಲ್

ಪುಸ್ತಕದ ಉದ್ದ ..................................ಪೆನ್ಸಿಲ್

ಯಾವುದರ ಅಳತೆ ಹೆಚ್ಚು?

ಹೆಚ್ಚು ಎಷ್ಟು?

## ದಪ್ಪ ಹೆಚ್ಚಿರುವ ಮರ



ಶಾಲಾ ಮೈದಾನದಲ್ಲಿರುವ ಕೆಲವು ಮರಗಳ ದಪ್ಪವನ್ನು ನೂಲು ಉಪಯೋಗಿಸಿ ಕಂಡುಹಿಡಿಯಿರಿ. ಹೆಚ್ಚು ದಪ್ಪ ಯಾವುದಕ್ಕೆ?

## ಸ್ಟ್ಯಾಂಡಿಂಗ್ ಜಂಪ್

ನಮ್ಮ ತರಗತಿಯ ಮಕ್ಕಳಲ್ಲಿ ಹೆಚ್ಚು ದೂರ ಹಾರುವವರು ಯಾರು? ಹಾರಿದ ದೂರವನ್ನು ಗುರುತು ಮಾಡಿ ಕಾಲಿನ ಪಾದದಲ್ಲಿ ಅಳೆಯಿರಿ.

## ಭಾರ ಹೆಚ್ಚು ಮತ್ತು ಕಡಿಮೆ ಇರುವವುಗಳು

ತಾಯಿಯ ಜೊತೆ ನೀಬ ಹಣ್ಣಿನ ಅಂಗಡಿಗೆ ಹೋದಳು.



ಯಾಕೆಂದು ನಿಮಗೆ ತಿಳಿದಿದೆಯೇ?
ಒಂದು ಸೇಬು ಮತ್ತು ಒಂದು ಕಿತ್ತಳೆ ಯಾವುದಕ್ಕೆ ಭಾರ ಹೆಚ್ಚು?
ಹೇಗೆ ಕಂಡು ಹಿಡಿಯಬಹುದು?
ಭಾರವನ್ನು ಅಳೆಯಲು ಉಪಯೋಗಿಸುವ ಉಪಕರಣಗಳನ್ನು ನೋಡಿರಿ.




## ಆಟದ ತಕ್ಕಡಿ ನಿರ್ಮಿಸುವ

**ಯಾವುದೆಲ್ಲ ವಸ್ತುಗಳು ಬೇಕು?**
**ನಿರ್ಮಿಸುವುದು ಹೇಗೆ?**



ಚಿತ್ರದಲ್ಲಿ ಕಾಣುವಂತೆ ಆಟದ ತಕ್ಕಡಿ ನಿರ್ಮಿಸಿರಿ.
ನಿಮ್ಮ ಬ್ಯಾಗಿನಲ್ಲಿರುವ ವಸ್ತುಗಳಲ್ಲಿ ಯಾವುದಕ್ಕೆ ಭಾರ ಹೆಚ್ಚು?
ಕಂಡುಹಿಡಿಯಿರಿ.
ಉರುಟು ಹಾಕಿರಿ.



## ನೀರನ್ನು ಅಳೆಯುವ

ಕೆಳಗೆ ನೀಡಿರುವ ಪಾತ್ರೆಗಳಲ್ಲಿ ಎಷ್ಟು ಗ್ಲಾಸ್ ನೀರು ಎರೆದರೆ ಅದು ತುಂಬಬಹುದು?

| ಪಾತ್ರೆ | ಊಹಿಸಿದ್ದು | ಸರಿಯಾದ ಅಳತೆ |
|---|---|---|
| ವಾಟರ್ ಬಾಟಲ್ | | |
| ಜಗ್ಗ್ | | |
| ಮಡಿಕೆ | | |

ಅತಿ ಹೆಚ್ಚು ನೀರು ಹಿಡಿಯುವ ಪಾತ್ರೆ ಯಾವುದು?




ಮನೆಯಲ್ಲಿರುವ ಬಕೆಟ್ ನಲ್ಲಿ ಎಷ್ಟು ಕಪ್ ನೀರು ಹಿಡಿಯಬಹುದು?

ಊಹಿಸಿ ಹೇಳಿರಿ.

ಸರಿಯಾಗಿದೆಯೇ ಎಂದು ಪರಿಶೀಲಿಸಿರಿ.

ಬಕೆಟ್ ತುಂಬಲು ಎಷ್ಟು ಕಪ್  ನೀರು ಬೇಕಾಯಿತು?



# 9

# ಕ್ಯಾಲೆಂಡರ್ ಆಟಗಳು



# ರೈಲು ಪ್ರಯಾಣ



ವಂದೇ ಭಾರತ್ ರೈಲಿನಲ್ಲಿ ಹೀರ ಕುಟುಂಬದ ಜೊತೆಯಲ್ಲಿ ಕಾಸರಗೋಡಿನಿಂದ ಶೊರ್ ನೂರಿಗೆ ಹೋಗುತ್ತಿದ್ದಾಳೆ.
ರೈಲು ದಕ್ಷಿಣ ಭಾಗಕ್ಕೆ ಹೋಗುತ್ತಿದೆ.

ಬೆಳಿಗ್ಗೆ 7 ಗಂಟೆಗೆ ರೈಲು ಹೊರಟಿತು.
ರೈಲು ಹೊರಟ ಸಮಯವನ್ನು ಗಡಿಯಾರದಲ್ಲಿ ಸೂಚಿಸಿರುವುದನ್ನು ನೋಡಿರಿ.




ರೈಲು ಕಣ್ಣೂರು ತಲುಪಿತು.
ಚಹಾ ಮತ್ತು ತಿಂಡಿ ತಂದರು.
ಕಣ್ಣೂರು ತಲುಪಿದ ಸಮಯವನ್ನು ನೋಡಿರಿ.
8 ಗಂಟೆ.




ರೈಲುಗಾಡಿ ಕಾಸರಗೋಡಿನಿಂದ ಕಣ್ಣೂರು ತಲಪಲು ಒಂದು ಗಂಟೆ ಸಮಯ ತಗುಲಿತು.




ರೈಲು ಹೊರಟಿತು. ಹೀರ ಕಿಟಿಕಿಯ ಮೂಲಕ ಹೊರಗೆ ನೋಡಿದಳು.
ಹೊಳೆ ಹಿನ್ನೀರು ಮತ್ತು ಸಮುದ್ರವನ್ನು ನೋಡುತ್ತಾ
ಸಮಯ ಹೋದದ್ದೇ ತಿಳಿಯಲಿಲ್ಲ.
ರೈಲು ನಿಂತಿತು. ‘ಕಲ್ಲಿಕೋಟೆಗೆ ತಲುಪಿತು.’ ಅಪ್ಪ ಹೇಳಿದರು.
‘ಅಪ್ಪ ಗಂಟೆ ಎಷ್ಟಾಯ್ತು?’ ಹೀರ ಕೇಳಿದಳು.
‘9 ಗಂಟೆಯಾಯಿತು. ಅಪ್ಪ ಹೇಳಿದರು.
ಕಣ್ಣೂರಿನಿಂದ ಕಲ್ಲಿಕೋಟೆ ತಲುಪಲು ಒಂದು ಗಂಟೆ ಬೇಕಾಯಿತು.




ಹಾಗಾದರೆ ಕಾಸರಗೋಡಿನಿಂದ ಕಲ್ಲಿಕೋಟೆಗೆ ತಲುಪಲು ಎಷ್ಟು ಸಮಯ ಬೇಕಾಯಿತು? [ ]




ರೈಲು ಹೊರಟಿತು. ಆಗ ಉತ್ತರ ಭಾಗಕ್ಕೆ ಒಂದು ರೈಲು ಹಾದು ಹೋಯಿತು.

‘ನಾವು ಶೊರ್ ನೂರ್ ಗೆ ತಲುಪುವುದು ಯಾವಾಗ?’
ಹೀರ ಕೇಳಿದಳು.
‘10 ಗಂಟೆಯಾದೀತು’ ಅಪ್ಪ ಹೇಳಿದರು.
10 ಗಂಟೆಗೆ ಅವರು ಶೊರ್ ನೂರ್ ನಲ್ಲಿ ಇಳಿದರು.
ಶೊರ್ ನೂರ್ ಇಳಿದ ಸಮಯವನ್ನು ಗಡಿಯಾರದಲ್ಲಿ ಗುರುತಿಸಿರಿ.
ಅಲ್ಲಿಂದ ಮಲಂಪುಯಕ್ಕೆ ತೆರಳಿದರು.
ಪೂರ್ವ ಭಾಗಕ್ಕೆ ಕಾರಿನಲ್ಲಿ ಹೋದರು.






1 ಗಂಟೆಗೆ ಮಲಂಪುಯ
ಅಣೆಕಟ್ಟಿಗೆ ತಲುಪಿದರು.





## ಸಮಯ ಬರೆಯುವ



| | | | |
|---|---|---|---|
| 2 ಗಂಟೆ | | | |

ಗಡಿಯಾರದಲ್ಲಿ ಸಮಯವನ್ನು ಗುರುತಿಸಿರಿ.




8 ಗಂಟೆ




5 ಗಂಟೆ




3 ಗಂಟೆ

## ಎಷ್ಟು ದಿವಸ?

ಹೀರ ಕುಟುಂಬದೊಂದಿಗೆ ಮಾವನ ಮದುವೆಗೆ ಪಾಲಕ್ಕಾಡಿಗೆ ಹೊರಟಳು.

ಡಿಸೆಂಬರ್ 9 ರಂದು ಬೆಳಿಗ್ಗೆ ಕಾಸರಗೋಡಿನಿಂದ ಹೊರಟರು.

ಮದುವೆ ಕಳೆದು 13-ನೇ ತಾರೀಕಿಗೆ ರಾತ್ರಿ ಅವರು ಮನೆಗೆ ತಲುಪಿದರು.

ಅವರು ಮನೆಯಲ್ಲಿ ಇಲ್ಲದ ದಿನಗಳು ಎಷ್ಟು ಎಂದು ಕ್ಯಾಲೆಂಡರ್ ನೋಡಿ ಕಂಡುಹಿಡಿದು ಬಣ್ಣ ಹಚ್ಚಿರಿ. ದಿನಗಳನ್ನು ಎಣಿಸಿ ಬರೆಯಿರಿ.

**December ಡಿಸೆಂಬರ್ 2025**

| ಆದಿತ್ಯ SUNDAY | ಸೋಮ MONDAY | ಮಂಗಳ TUESDAY | ಬುಧ WEDNESDAY | ಗುರು THURSDAY | ಶುಕ್ರ FRIDAY | ಶನಿ SATURDAY |
|---|---|---|---|---|---|---|
| ★ | 1<br>15 | 2<br>16 | 3<br>17 | 4<br>18 | 5<br>19 | 6<br>20 |
| 7<br>21 | 8<br>22 | 9<br>23 | 10<br>24 | 11<br>25 | 12<br>26 | 13<br>ಎರಡನೆ ಶನಿ 27 |
| 14<br>28 | 15<br>29 | 16<br>1 | 17<br>2 | 18<br>3 | 19<br>4 | 20<br>5 |
| 21<br>6 | 22<br>7 | 23<br>8 | 24<br>9 | 25<br>ಕ್ರಿಸ್ ಮಸ್ 10 | 26<br>11 | 27<br>12 |
| 28<br>13 | 29<br>14 | 30<br>15 | 31<br>16 | ★ | ★ | ★ |

ಹೀರ ಮತ್ತು ಕುಟುಂಬದವರು ಪ್ರಯಾಣ ಹೊರಟ ದಿನ ಯಾವುದು?

ಅವರು ಮನೆಗೆ ತಲುಪಿದ ದಿನ ಯಾವುದು?

ಮದುವೆಯು ಬುಧವಾರ ಆಗಿದೆ. ಅಂದು ತಾರೀಕು ಎಷ್ಟು?

ಅವರು ಮನೆಯಲ್ಲಿ ಇಲ್ಲದ ದಿನಗಳ ತಾರೀಕುಗಳು ಯಾವುದೆಲ್ಲ?

## ಊಟಿಗೆ ಪ್ರಯಾಣ

ಮದುವೆಯ ನಂತರ ಮಾವ ಹಾಗೂ ಅತ್ತೆ ಊಟಿಗೆ ಹೋದರು.
ಅವರು 14 ನೇ ತಾರೀಕಿನಂದು ಆದಿತ್ಯವಾರ ಬೆಳಿಗ್ಗೆ 6 ಗಂಟೆಗೆ ಹೊರಟರು.



20 ನೇ ತಾರೀಕು ಶನಿವಾರ ರಾತ್ರಿ ಹಿಂದೆ ತಲುಪಿದರು.
ಅವರು ಊಟಿಯಲ್ಲಿ ಕಳೆದ ದಿನಗಳು ಎಷ್ಟು?

ಆ ದಿನಗಳಿಗೆ ಕ್ಯಾಲೆಂಡರ್ ನಲ್ಲಿ ಬಣ್ಣ ಹಚ್ಚಿರಿ.
ಎಣಿಸಿ ಬರೆಯಿರಿ.

ಯಾವುದೆಲ್ಲ ದಿನಗಳು? ತಾರೀಕು ಬರೆಯಿರಿ.

## ಹೀರಳ ದಿನಚರಿ

9 ನೇ ತಾರೀಕಿನಿಂದ ಹೀರ ಬರೆದ ದಿನಚರಿಯನ್ನು ನೋಡಿರಿ.

ಪಾಲಕ್ಕಾಡ್
09.12.2025



ನಾನು ತಂದೆ ಮತ್ತು ತಾಯಿ ಮಾವನ ಮನೆಗೆ ಹೊರಟೆವು. ಬೆಳಿಗ್ಗೆ ವಂದೇ ಭಾರತ್ ರೈಲಿನಲ್ಲಿ ಹೊರಟೆವು. ಕಾಸರಗೋಡಿನಿಂದ ದಕ್ಷಿಣದ ಕಡೆಗೆ ಪ್ರಯಾಣಿಸಿದೆವು. ಮಧ್ಯಾಹ್ನ ಮಲಂಪುಯ ಅಣೆಕಟ್ಟು ನೋಡಲು ಹೋದೆವು. ಆನಂತರ ಹೂದೋಟದಲ್ಲಿ ಸುತ್ತಾಡಿದೆವು.ರೋಪ್ ವೇ ಯಲ್ಲಿ ಹತ್ತಿದೆವು. ನನಗೆ ಮೊದಲು ಹೆದರಿಕೆಯಾಯಿತು. ನಂತರ ಅದರಲ್ಲಿ ಕುಳಿತು ಹಲವಾರು ದೃಶ್ಯಗಳನ್ನು ನೋಡಿದೆನು. ತುಂಬಾ ಖುಷಿಯಾಯಿತು. ಸಂಜೆ ಅಲ್ಲಿಂದ ಹಿಂತಿರುಗಿದೆವು. ರಾತ್ರಿ ಮಾವನ ಮನೆಗೆ ಬಂದೆವು.

ದಿನಚರಿಯಿಂದ ಸಮಯಕ್ಕೆ ಸಂಬಂಧಿಸಿದ ಪದಗಳನ್ನು ಹುಡುಕಿ ಬರೆಯಿರಿ.

- ಬೆಳಿಗ್ಗೆ
- 
- 
- 

## ಕ್ಯಾಲೆಂಡರ್ ನೋಡುವ



ಇನ್ನು ಏನೆಲ್ಲ ಇವೆ? ನೀವು ಬರೆಯಿರಿ.

ವಾರದ ದಿನಗಳ ಬಗ್ಗೆ ನಮಗೆ ಒಂದು ಪದ್ಯ ಹಾಡೋಣ.



## ಏಳು ಕೃಷಿಕರು

ಆದಿತ್ಯ ನೇಜಿಯ ನೆಡುವಾಗ
ಸೋಮವು ನೀರನು ಎರೆಯುವುದು
ಮಂಗಳ ಕೆಸರಲಿ ಹಾರದೆಯೆ
ಬುಧನೊಂದಿಗೆ  ಬಯಲಿನಲಿ
ಗುರುವು ಬಾಳೆಯ ತೋಟದಲಿ
ಶುಕ್ರವು ಬರುತಿದೆ ಹಾರೆಜೊತೆ
ಶನಿಯು ನೀಡಿದೆ ಗೊಬ್ಬರವ
ಕೃಷಿಕರು ಇವರು ಏಳು ಜನ

## ತಿಂಗಳುಗಳು ಹನ್ನೆರಡು

ಜನವರಿ, ಫೆಬ್ರವರಿ,
ಮಾರ್ಚ್, ಏಪ್ರಿಲ್,
ಮೇ, ಜೂನ್, ಜುಲಾಯಿಯೂ
ಅಗೋಸ್ಟ್, ಸೆಪ್ಟಂಬರ್, ಅಕ್ಟೋಬರವು
ನವೆಂಬರ್, ಡಿಸೆಂಬರ್ ತಿಂಗಳುಗಳು
ಹನ್ನೆರಡಲ್ಲವೇ ತಿಂಗಳುಗಳು




## ಕಾಲೆಂಡರ್ ನೋಡಿ ಹೇಳಿರಿ

31 ದಿನಗಳಿರುವ ತಿಂಗಳುಗಳು?

30 ದಿನಗಳಿರುವ ತಿಂಗಳುಗಳು?

30 ಕ್ಕಿಂತ ಕಡಿಮೆ ದಿನಗಳಿರುವ ತಿಂಗಳುಗಳು?

**ಜನವರಿ ತಿಂಗಳಿನಲ್ಲಿ 31 ದಿನಗಳು ಇವೆ. ಎಲ್ಲಾ ತಿಂಗಳುಗಳಲ್ಲಿ ಹಾಗೆ ಅಲ್ಲವಲ್ಲ**

## ಕ್ಯಾಲೆಂಡರ್ ಆಟಗಳು

ಕ್ಯಾಲೆಂಡರಲ್ಲಿ ಈ ರೀತಿಯ 4 ಕೋಣೆಗಳನ್ನು ನೋಡಿರಿ. ಏನಾದರು ವಿಶೇಷತೆ ಇದೆಯೇ?

ನಾನು ಕಂಡುಹಿಡಿದೆ. ಮೂಲೆಯಿಂದ ಮೂಲೆಗೆ ಕೂಡಿಸಿದರೆ ಒಂದೇ ಉತ್ತರ ಸಿಗುವುದು.




September ಸೆಪ್ಟಂಬರ್ 2025

| ಆದಿತ್ಯ SUNDAY | ಸೋಮ MONDAY | ಮಂಗಳ TUESDAY | ಬುಧ WEDNESDAY | ಗುರು THURSDAY | ಶುಕ್ರ FRIDAY | ಶನಿ SATURDAY |
|---|---|---|---|---|---|---|
| ★ | 1 16 | 2 17 | 3 18 | 4 19 | 5 20 | 6 21 |
| 7 22 | 8 23 | 9 24 | 10 25 | 11 26 | 12 27 | 13 ಎರಡನೆ ಶನಿ 28 |
| 14 29 | 15 30 | 16 31 | 17 1 | 18 2 | 19 3 | 20 4 |
| 21 5 | 22 6 | 23 7 | 24 8 | 25 9 | 26 10 | 27 11 |
| 28 12 | 29 13 | 30 14 | ★ | ★ | ★ | ★ |



1 ಮತ್ತು 9 ಮೂಲೆಯಿಂದ ಮೂಲೆಗೆ
2 ಮತ್ತು 8 ಮೂಲೆಯಿಂದ ಮೂಲೆಗೆ

| | |
|---|---|
| 1 | 2 |
| 8 | 9 |

1 + 9 = 10
2 + 8 = 10

1 ಮತ್ತು 2 ಉದ್ದ ಸಾಲಿನಲ್ಲಿದೆ.

1 ಮತ್ತು 8 ಅಡ್ಡ ಸಾಲಿನಲ್ಲಿದೆ.

ಎಲ್ಲವೂ ಹಾಗೆ ಆಗಿದೆಯೇ? ಮಾಡಿ ನೋಡಿರಿ.

| | |
|---|---|
| 6 | 7 |
| 13 | 14 |

| | |
|---|---|
| 8 | 9 |
| 15 | 16 |

| | |
|---|---|
| 17 | 18 |
| 24 | 25 |

-------------------------- -------------------------- --------------------------

-------------------------- -------------------------- --------------------------

"ಒಂದನೇ ಸಾಲಿನ ಸಂಖ್ಯೆಯ ಮೊತ್ತ ಮತ್ತು ಎರಡನೇ ಸಾಲಿನ ಸಂಖ್ಯೆಯ ಮೊತ್ತಗಳು ತಮ್ಮೊಳಗಿನ ವ್ಯತ್ಯಾಸ 2 ಅಲ್ಲವೇ?" ಸಿದ್ದು ಕೇಳಿದನು.

| | |
|---|---|
| **6** | **7** |
| **13** | **14** |




ಉಳಿದವುಗಳನ್ನು ಮಾಡಿನೋಡಿರಿ.

8 + 15 =            17 + 24 =            19 + 26 =

9 + 16 =            18 + 25 =            20 + 27 =

ಕ್ಯಾಲೆಂಡರ್ ನೋಡಿ ಇದೇ ರೀತಿಯ ಹೆಚ್ಚಿನ ಸಂಖ್ಯೆಗಳನ್ನು ಕಂಡುಹಿಡಿದು ಬರೆಯಿರಿ.




ಕ್ಯಾಲೆಂಡರಿನ ಸಂಖ್ಯೆಗಳಿಂದ ಬೇರೆ ಯಾವುದಾದರೂ ಸಂಬಂಧಗಳನ್ನು ಕಂಡುಹಿಡಿಯಲು ಸಾಧ್ಯವಿದೆಯೇ?



# 10

# ಒಲವಿನ ಸಂಬಂಧಗಳು



## ಗುಂಪುಮಾಡಿ ಆಡುವ



ತುಂಬ ಮಣಿಗಳಿವೆ. ಒಬ್ಬರಿಗೆ ತುಂಬ ಮಣಿಗಳನ್ನು ತೆಗೆಯಬಹುದು
ಒಬ್ಬರಿಗೆ ಸಿಕ್ಕಿದ ಮಣಿಗಳನ್ನು ಎರಡರ ಗುಂಪು ಮಾಡಬೇಕು.
ಮಣಿಗಳು ಬಾಕಿ ಉಳಿಯಬಾರದು.
ಹಾಗಾದರೆ ಒಂದು ಪೋಯಿಂಟ್ ಲಭಿಸುವುದು.

ಸುಮಳಿಗೆ 16 ಮಣಿಗಳು ಸಿಕ್ಕಿತು.
ಸುಮಳಿಗೆ ಪೋಯಿಂಟ್ ಸಿಗಬಹುದೇ?
ಇತರ ಗೆಳೆಯರಿಗೆ ಸಿಕ್ಕಿದ ಸಂಖ್ಯೆಗಳನ್ನು ನೋಡಿರಿ.

7, 22, 11, 10, 12, 14, 25, 18, 20, 19

ಇವುಗಳಲ್ಲಿ ಯಾವುದೆಲ್ಲ ಸಂಖ್ಯೆಯ ಮಣಿಗಳನ್ನು ಬಾಕಿ ಉಳಿಯದಂತೆ 2 ರ ಗುಂಪು ಮಾಡಬಹುದು?

2 ರ ಗುಂಪುಗಳಾಗಿ ಮಾಡುವಾಗ ಒಂದು ಬಾಕಿ ಆಗುವ ಸಂಖ್ಯೆಗಳು ಯಾವುವು?

ಇತರ ಕೆಲವು ಸಂಖ್ಯೆಗಳನ್ನು ಬರೆಯಿರಿ.

| **2 ರ ಗುಂಪು ಮಾಡುವಾಗ ಒಂದು ಬಾಕಿ ಆಗುವ ಸಂಖ್ಯೆಗಳು** | **2 ರ ಗುಂಪು ಮಾಡುವಾಗ ಒಂದು ಬಾಕಿ ಆಗದ ಸಂಖ್ಯೆಗಳು** |
|---|---|
| | |

1, 3, 5, 7, ......., ........, ........,

ಇವುಗಳನ್ನು ವಿಷಮ ಸಂಖ್ಯೆಗಳು ಎನ್ನುವರು.

2, 4, 6, 8, ......., ........, ........,

ಇವುಗಳನ್ನು ಸಮ ಸಂಖ್ಯೆಗಳು ಎನ್ನುವರು.

# ಅಂಕೆಗಳ ಮೊತ್ತ

ಮಿಯ ಗಣಿತ ಕ್ಲಬ್ಬಿನಲ್ಲಿ ಮಂಡಿಸಲು ಚಟುವಟಿಕೆಗಳನ್ನು ತಯಾರಿಸುತ್ತಿದ್ದಾಳೆ.




ಅಂಕೆಗಳ ಮೊತ್ತ 10 ಸಿಗುವ ಎರಡಂಕೆ ಸಂಖ್ಯೆಗಳು.

ಕಂಡು ಹಿಡಿದ ಸಂಖ್ಯೆಗಳನ್ನು ಅನುಕ್ರಮ ವಾಗಿ ಸಣ್ಣದರಿಂದ ದೊಡ್ಡದರ ಕಡೆಗೆ ಬರೆಯಿರಿ.

ಇವುಗಳಲ್ಲಿ ಹತ್ತಿರ ಹತ್ತಿರದ ಸಂಖ್ಯೆಗಳು ತಮ್ಮೊಳಗಿರುವ ಸಂಬಂಧವೇನು? ಬರೆಯಿರಿ?

## ಕ್ರಮ ಬದಲಾಯಿಸುವ

ಮಿಯ ಚಾರ್ಟಿನಲ್ಲಿ ಬರೆದಿರುವುದನ್ನು ನೋಡಿರಿ.

| |
|---|
| 8 + 9 = 17<br>9 + 8 = 17 |
| 23 + 11 = 34<br>11 + 23 = 34 |
| 45 + 23 = 68<br>23 + 45 = 68 |




ಹೆಚ್ಚಿನ ಸಂಖ್ಯೆಗಳನ್ನು ಬರೆದು ನೀವು ಮಾಡಿ ನೋಡಿರಿ.
ಅವುಗಳನ್ನು ನೋಟುಪುಸ್ತಕದಲ್ಲಿ ಬರೆಯಿರಿ.

## ಅನುಕ್ರಮವಾದ ಸಂಖ್ಯೆಗಳ ಮೊತ್ತ

| | | | | |
|---|---|---|---|---|
| 1 | + | 2 | = | 3 |
| 2 | + | 3 | = | 5 |
| 3 | + | 4 | = | 7 |
| 6 | + | 7 | = | 13 |
| 8 | + | 9 | = | ......... |
| 10 | + | 11 | = | ......... |
| 12 | + | 13 | = | ......... |
| 15 | + | 16 | = | ......... |

ಮಿಯ ಮತ್ತು ಗೆಳೆಯರು ಅನುಕ್ರಮವಾದ 2 ಎಣಿಕಾ ಸಂಖ್ಯೆಗಳನ್ನು ಕೂಡಿಸಿ ಬರೆದಿರುವುದನ್ನು ನೋಡಿರಿ. ಮುಂದುವರಿಸಿ ಬರೆಯಿರಿ.

ಅನುಕ್ರಮವಾದ ಎರಡು ಎಣಿಕಾ ಸಂಖ್ಯೆಗಳ ಮೊತ್ತದ ವಿಶೇಷತೆ ಏನು?

| |
|---|
| |

## ವಿಷಮ ಸಂಖ್ಯೆಗಳು

ಇನ್ನು ಎರಡು ವಿಷಮ ಸಂಖ್ಯೆಗಳನ್ನು ಕೂಡಿಸಿ ನೋಡೋಣವೇ? ಮಿಯ ಕೇಳಿದಳು. ಅವರು ಕೂಡಿಸಿ ಬರೆದರು. ಮುಂದಿನ ಸಂಖ್ಯೆಗಳನ್ನು ನೀವು ಕೂಡಿಸಿ ಬರೆಯಿರಿ.




| | | | | |
|---|---|---|---|---|
| 1 | + | 3 | = | 4 |
| 3 | + | 5 | = | 8 |
| 7 | + | 5 | = | ......... |
| 3 | + | 9 | = | ......... |
| 11 | + | 7 | = | ......... |
| ..... | + | ..... | = | ......... |
| ..... | + | ..... | = | ......... |

ಎರಡು ವಿಷಮ ಸಂಖ್ಯೆಗಳ ಮೊತ್ತದ ವಿಶೇಷತೆ ಏನು?

ಇನ್ನು ಎರಡು ಸಮ ಸಂಖ್ಯೆಗಳನ್ನು ಕೂಡಿಸಿ ನೋಡಿರಿ.
ಮೊತ್ತದ ವಿಶೇಷತೆ ಏನು?

ಒಂದು ಸಮಸಂಖ್ಯೆ ಮತ್ತು ಒಂದು ವಿಷಮ ಸಂಖ್ಯೆಗಳನ್ನು ಕೂಡಿಸಿದರೆ.....?

## ಕಳೆಯುತ್ತಾ... ಕಳೆಯುತ್ತಾ...

ಸುಮಿಯ ಕೈಯಲ್ಲಿ 16 ರೂಪಾಯಿ ಇದೆ. 5 ರೂಪಾಯಿಗೆ ಪೆನ್ನು ಖರೀದಿಸಿದಳು. 3 ರೂಪಾಯಿಗೆ ಒಂದುಪೆನ್ಸಿಲು ಖರೀದಿಸಿದಳು. ಇನ್ನು ಸುಮಳ ಕೈಯಲ್ಲಿ ಎಷ್ಟು ಹಣ ಬಾಕಿ ಇದೆ?

**ನಾನು ಹೀಗೆ ಮಾಡಿದೆ**

ಒಟ್ಟು ಕೈಯಲ್ಲಿ ಇರುವುದು 16 ರೂಪಾಯಿ. ಪೆನ್ನು ಮತ್ತು ಪೆನ್ಸಿಲ್ ಖರೀದಿಸಿದಾಗ
$5 + 3 = 8$ ರೂಪಾಯಿ ಖರ್ಚಾಯಿತು
ಬಾಕಿ $16 - 8 = 8$ ರೂಪಾಯಿ

| | | |
|---|---|---|
| ಕೈಯಲ್ಲಿ ಇದ್ದ ಹಣ | | 16 ರೂಪಾಯಿ |
| ಪೆನ್ನಿಗೆ ಕೊಟ್ಟ ಹಣ | | 5 ರೂಪಾಯಿ |
| ಬಾಕಿ | = | $16 - 5 = 11$ ರೂಪಾಯಿ |
| ಪೆನ್ಸಿಲಿಗೆ ಕೊಟ್ಟ ಹಣ | = | 3 ರೂಪಾಯಿ |
| ಬಾಕಿ | = | $11 - 3 = 8$ ರೂಪಾಯಿ |

16 ರಿಂದ 5 ಮತ್ತು 3 ನ್ನು ಕಳೆದರೂ
16 ರಿಂದ 8 ನ್ನು ಸಿಗುವ ಉತ್ತರ ಒಂದೇ ಆಗಿದೆ.

24 ರಿಂದ 7 ಮತ್ತು 3 ನ್ನು ಕಳೆಯುವುದಾದರೆ...?
24 ರಿಂದ ಯಾವ ಸಂಖ್ಯೆಯನ್ನು ಕಳೆಯಬೇಕು? ☐

46 ರಿಂದ 10 ಮತ್ತು 6 ಕಳೆಯುವುದರ ಬದಲು 46 ರಿಂದ ಯಾವ ಸಂಖ್ಯೆ ಕಳೆಯಬೇಕು? ☐

## ಕೂಡಿಸುತ್ತಾ ಹೋಗೋಣ

ಮಿಯ ಕೆಲವು ಸಂಖ್ಯೆಗಳನ್ನು ಕ್ರಮವಾಗಿ ಬರೆದಿರುವುದನ್ನು ನೋಡಿರಿ.

1, 3, 5, 7, ........., ............, .............

ಮುಂದಿನ ಸಂಖ್ಯೆಗಳನ್ನು ಬರೆಯಿರಿ.

**ಈ ಸಂಖ್ಯೆಗಳ ವಿಶೇಷತೆಯನ್ನು ಕಂಡುಹಿಡಿಯಿರಿ**

1 ರೊಡನೆ 2 ರಂತೆ ಕೂಡಿಸುತ್ತಾ ಹೋಗುವ ಸಂಖ್ಯೆಗಳು...

ಇನ್ನು 2 ರೊಡನೆ 2 ರಂತೆ ಕೂಡಿಸಿ ಸಿಗುವ ಸಂಖ್ಯೆಗಳನ್ನು ಬರೆಯಿರಿ.

2, 4, 6, ......., ........, ..........

ಈ ಸಂಖ್ಯೆಗಳ ವಿಶೇಷತೆಯೇನು?




ಇನ್ನು 5 ರೊಡನೆ 5 ರಂತೆ ಕೂಡಿಸಿ ಸಿಗುವ ಸಂಖ್ಯೆಗಳನ್ನು ಬರೆಯಿರಿ.

5, 10, 15, ......., ........, ..........

ಈ ಸಂಖ್ಯೆಗಳ ವಿಶೇಷತೆಯೇನು?

ಇನ್ನು 10 ರೊಡನೆ 10 ರಂತೆ ಕೂಡಿಸಿದಾಗ ಸಿಗುವ ಸಂಖ್ಯೆಗಳನ್ನು ಬರೆಯಿರಿ.

-----------------------------------------------------------------

ಎರಡನೇ ಅಂಕೆಯು 0 ಯಾಗಿ ಬರುವ ಎಷ್ಟು ಎರಡಂಕೆ ಸಂಖ್ಯೆಗಳಿವೆ?

ಇನ್ನು 1 ರೊಡನೆ 10 ರಂತೆ ಕೂಡಿಸಿದಾಗ ಸಿಗುವ ಸಂಖ್ಯೆಗಳನ್ನು ಬರೆಯಿರಿ.

1, 11, 21, ......., ........, ..........

ಎರಡನೇ ಅಂಕೆಯು 1 ಆಗಿ ಬರುವ ಎರಡಂಕೆ ಸಂಖ್ಯೆಗಳು ಎಷ್ಟಿವೆ?

1 ರಿಂದ 7 ರ ವರೆಗಿನ ಸಂಖ್ಯೆಗಳನ್ನು ಉರುಟುಗಳಲ್ಲಿ ಬರೆಯಿರಿ.
ಒಂದೇ ಸಾಲಿನ 3 ಸಂಖ್ಯೆಗಳನ್ನು ಕೂಡಿಸಿದಾಗ ಮೊತ್ತ 12 ಸಿಗಬೇಕು.
ಸಂಖ್ಯೆಗಳನ್ನು ಆವರ್ತಿಸಿ ಬರೆಯಬಾರದು.



ಕೆಳಗೆ ನೀಡಿರುವವುಗಳಲ್ಲಿ ಸಣ್ಣ ಸಂಖ್ಯೆಯಿಂದ ದೊಡ್ಡ ಸಂಖ್ಯೆಯ ಕ್ರಮದಲ್ಲಿ ಬರೆದಿರುವುದು ಯಾವುದು? ಅವುಗಳಿಗೆ ✓ ಹಾಕಿರಿ

| | | | | | |
|---|---|---|---|---|---|
| 25 | 28 | 31 | 34 | 37 | ☐ |
| 82 | 78 | 74 | 72 | 68 | ☐ |
| 63 | 62 | 61 | 60 | 29 | ☐ |
| 52 | 58 | 64 | 70 | 76 | ☐ |
| 43 | 46 | 42 | 45 | 41 | ☐ |
| 79 | 80 | 81 | 82 | 83 | ☐ |

## ಸಂಖ್ಯಾ ನಮೂನೆ

ಸಂಖ್ಯಾ ನಮೂನೆಗಳಲ್ಲಿ ಬಿಟ್ಟು ಹೋದ ಸಂಖ್ಯೆ ಯಾವುದು?

1) 10, 18, 26, 34, ........, 50

2) 31, 40, 49, ........., 67

3) 88, 82, 76, 70, ..........

4) 56, 60, 64, ............, 72

5) 95, 89, 83, 77, .............

## ಸಂಖ್ಯೆಗಳನ್ನು ನಿರ್ಮಿಸುವ

ಮಿಯ ಮತ್ತು ಗೆಳೆಯರು ಅಂಕೆಗಳನ್ನು ಉಪಯೋಗಿಸಿ ಸಂಖ್ಯೆಗಳನ್ನು ನಿರ್ಮಿಸುತ್ತಿದ್ದಾರೆ.

ಒಬ್ಬರಿಗೆ ಎರಡು ಕಾರ್ಡುಗಳನ್ನು ತೆಗೆಯಬಹುದು. ಅವುಗಳನ್ನು ಉಪಯೋಗಿಸಿ ಎರಡಂಕೆ. ಸಂಖ್ಯೆಗಳನ್ನು ನಿರ್ಮಿಸಬೇಕು

ಮಿಯಾಳಿಗೆ ಸಿಕ್ಕಿದ ಕಾರ್ಡುಗಳು.




| | |
|---|---|
| 3 | 5 |

ಮಿಯ ನಿರ್ಮಿಸಿದ ಎರಡಂಕೆ ಸಂಖ್ಯೆಗಳು : 35, 53

ಅವಳ ಗೆಳೆಯರಿಗೆ ಸಿಕ್ಕಿದ ಕಾರ್ಡುಗಳನ್ನು ಕೆಳಗೆ ನೀಡಲಾಗಿದೆ.

ಅವರು ನಿರ್ಮಿಸಿದ ಎರಡಂಕೆ ಸಂಖ್ಯೆಗಳನ್ನು ಬರೆಯಿರಿ.

| | | |
|---|---|---|
| 2 | 6 | ------------------------------ |
| 9 | 8 | ------------------------------ |
| 5 | 0 | ------------------------------ |

4, 5 ಎಂಬೀ ಅಂಕೆಗಳು ಆವರ್ತಿಸಿ ಆವರ್ತಿಸದಂತೆ ಯಾವುದೆಲ್ಲ ಎರಡಂಕೆ ಸಂಖ್ಯೆಗಳನ್ನು ನಿರ್ಮಿಸಬಹುದು?

------------------------------

ಆವರ್ತಿಸಿ ಉಪಯೋಗಿಸಿದರೆಯೋ?

## ಕೋಟೆ

| | | | | | | |
|---|---|---|---|---|---|---|
| 20 | 30 | 27 | 34 | 26 | 28 | 38 |
| 25 | 15 | 13 | 35 | 25 | 49 | 56 |
| 12 | 18 | 64 | 40 | 30 | 48 | 27 |
| 28 | 32 | 29 | 35 | 20 | 20 | 20 |
| 20 | 20 | 20 | 20 | 20 | 20 | 20 |

**3 ಜನರಿಗೆ ಆಟ ಆಡಬಹುದು.**

ಒಂದು ಉರುಟುನಿಂದ ಇನ್ನೊಂದು ಉರುಟಿಗೆ ಗೆರೆ ಎಳೆಯಬೇಕು.

ಮೂಲೆಯಿಂದ ಮೂಲೆಗೆ ಗೆರೆಗಳನ್ನು ಎಳೆಯುಬಾರದು.

ಆ ಸಂಖ್ಯೆಗಳನ್ನು ತಮ್ಮೊಳಗೆ ಕೂಡಿಸಿರಿ.

ಉಳಿದ ಇಬ್ಬರು ಇದೇ ರೀತಿ ಮಾಡಲಿ.

ಮೂವರು ಈ ರೀತಿ ಮಾಡಿದ ನಂತರ ಉತ್ತರವಾಗಿ ಸಿಕ್ಕಿದ ಸಂಖ್ಯೆಗಳನ್ನು ದೊಡ್ಡದರಿಂದ ಸಣ್ಣದರ ಕಡೆಗೆ ಎಂಬ ಕ್ರಮದಲ್ಲಿ ಕ್ರಮೀಕರಿಸಲಿ.

ದೊಡ್ಡಸಂಖ್ಯೆಗಳ ಕ್ರಮಕ್ಕೆ ಹೊಂದಿಕೊಂಡು 5, 3, 1 ಎಂಬಂತೆ ಪೋಯಿಂಟ್ ಸಿಗುವುದು. ಹತ್ತಿರ ಹತ್ತಿರದ ಸಂಖ್ಯೆಯನ್ನು ಸೇರಿಸಿ ಚೌಕ ಎಳೆದರೆ ಒಂದು ಕೋಟೆ ಪೂರ್ತಿಯಾಗುವುದು. ಕೋಟೆ ಪೂರ್ತಿ ಮಾಡಿದವರಿಗೆ ಹೆಚ್ಚುವರಿಯಾಗಿ ಹತ್ತು ಪಾಯಿಂಟ್ ಸಿಗುವುದು.

ಹೆಚ್ಚಿನ ವಿಷಯಗಳನ್ನು ಟೀಚರಲ್ಲಿ ಕೇಳಿ ತಿಳಿಯಿರಿ. ಆಡಿರಿ.



11

# ಎಣಿಸಿ... ಎಣಿಸಿ... ಕೋಣೆಯೊಳಗೆ



## ಜಾತ್ರೆಯ ಸಂತೆ

ತಾನಕ್ಕೆರೆ ಊರಿನಲ್ಲಿ ಜಾತ್ರೆ ಇದೆ .
ಅಲ್ಲಿನ ಜಾತ್ರೆಯ ಸಂತೆಯನ್ನು ಒಮ್ಮೆ ನೋಡಬೇಕು. ಸಂತೆಯ ಅಂಗಡಿಯಲ್ಲಿ ಇಟ್ಟಿರುವ ಗೊಂಬೆಗಳನ್ನು ನೋಡಿರಿ.



ಪ್ರತಿಯೊಂದು ತರದ ಗೊಂಬೆಗಳು ಎಷ್ಟಿವೆ? ಪಟ್ಟಿಯಲ್ಲಿ ಬರೆಯಿರಿ.

| ಗೊಂಬೆ ಗಳು |  |  |  |  |  |
|---|---|---|---|---|---|
| ಸಂಖ್ಯೆ | | | | | |

ಹೆಚ್ಚು ಇರುವ ಗೊಂಬೆ ಯಾವುದು?

ಕಡಿಮೆ ಇರುವ ಗೊಂಬೆ ಯಾವುದು?

# ಹಕ್ಕಿ ಗೊಂಬೆಗಳು

ಹಕ್ಕಿ ಗೊಂಬೆಗಳ ಗೊಂಬೆಯ ಚಿತ್ರ ನೋಡಿರಿ.
ಪ್ರತಿಯೊಂದು ಎಷ್ಟಿವೆ? ಪಟ್ಟಿಯಲ್ಲಿ ಬರೆಯಿರಿ.



| ಗಿಳಿ ಗೊಂಬೆ | ಬಾತುಕೋಳಿ ಗೊಂಬೆ | ಕೋಳಿ ಗೊಂಬೆ | ಗೂಬೆ ಗೊಂಬೆ | ಗಿಡುಗ ಗೊಂಬೆ |
|---|---|---|---|---|
| | | | | |

ಅತಿ ಹೆಚ್ಚು ಇರುವ ಗೊಂಬೆ ಯಾವುದು?

ಗಿಳಿ ಗೊಂಬೆಗಳು ಗೂಬೆ ಗೊಂಬೆಗಳಿಗಿಂತ ಎಷ್ಟು ಹೆಚ್ಚು ಇವೆ?

ಕೋಳಿ ಗೊಂಬೆ ಮತ್ತು ಬಾತುಕೋಳಿ ಗೊಂಬೆಗಳಲ್ಲಿ
ಹೆಚ್ಚಿರುವುದು ಯಾವುದು?

ಎಷ್ಟು ಹೆಚ್ಚು?

ನೀವು ಒಂದು ಪ್ರಶ್ನೆ ಬರೆಯಿರಿ.
ಗೆಳೆಯನಲ್ಲಿ ಕೇಳಿರಿ.

## ಗೊಂಬೆಗಳ ಬೆಲೆ

ಗೊಂಬೆಗಳ ಬೆಲೆ ನೋಡಿರಿ.

| ಗೊಂಬೆ | ಬೆಲೆ |
|---|---|
|  | 125 ರೂಪಾಯಿ |
|  | 89 ರೂಪಾಯಿ |
|  | 99 ರೂಪಾಯಿ |
|  | 69 ರೂಪಾಯಿ |
|  | 79 ರೂಪಾಯಿ |
|  | 89 ರೂಪಾಯಿ |

ಸಮಾನ ಬೆಲೆ ಇರುವ ಗೊಂಬೆಗಳು ಯಾವುವು?

ಬೆಲೆ ಎಷ್ಟು?

ಬಾತುಕೋಳಿ ಗೊಂಬೆ ಮತ್ತು ಬೆಕ್ಕಿನ ಗೊಂಬೆಗಳ ಬೆಲೆಗಳು ತಮ್ಮೊಳಗೆ 20 ರೂಪಾಯಿ ವ್ಯತ್ಯಾಸ ಇದೆ ಎಂದು ಹೇಳಿದರೆ ಸರಿಯೇ? ಯಾಕೆ?

ಬೆಲೆಯಲ್ಲಿ 10 ರೂಪಾಯಿ ವ್ಯತ್ಯಾಸವಿರುವ ಎರಡು ಗೊಂಬೆಗಳ ಹೆಸರು ಮತ್ತು ಬೆಲೆಯನ್ನು ಬರೆಯಿರಿ?

90 ರೂಪಾಯಿಗಿಂತ ಕಡಿಮೆ ಬೆಲೆ ಇರುವ ಗೊಂಬೆಗಳು ಯಾವುವು?

100 ರೂಪಾಯಿ ತಂದ ಒಂದು ಮಗುವಿಗೆ ಖರೀದಿಸಿ ಸಾಧ್ಯವಿಲ್ಲದ ಗೊಂಬೆ ಯಾವುದು?

ಯಾಕೆ?

## ಪಟ್ಟಿಯನ್ನು ನೋಡಿರಿ

100 ರೂಪಾಯಿ ಇರುವ ಒಂದು ಮಗು ಗೊಂಬೆ ಖರೀದಿಸಿದಾಗ ಬಾಕಿ ಸಿಗುವ ಹಣ ಎಷ್ಟು? ಪಟ್ಟಿಯಲ್ಲಿ ಬರೆಯಿರಿ.

| ಖರೀದಿಸಿದ ಗೊಂಬೆ | ಬೆಲೆ | ಬಾಕಿ ಸಿಗುವುದು |
|---|---|---|
| ಮೊಲ ಗೊಂಬೆ | 89 ರೂಪಾಯಿ | 11 ರೂಪಾಯಿ |
| ಮಂಗ ಗೊಂಬೆ | | |
| ಬಾತುಕೋಳಿ ಗೊಂಬೆ | | |
| ಬೆಕ್ಕು ಗೊಂಬೆ | | |

ನಾಳೆ ಜಾತ್ರೆಗೆ ಹೋದರೆ ನಾನು ಯಾವ ಆಟಿಕೆಯನ್ನು ಖರೀದಿಸಿ ಕೊಳ್ಳಬೇಕು?



ನಿಮಗೆ ಇಷ್ಟ ಇರುವ ಒಂದು ಆಟಿಕೆಯ ಚಿತ್ರ ಬಿಡಿಸಿರಿ.

**ಮಾಳುವಿನ ಗೆಳೆಯರು ರಚಿಸಿದ ಗೊಂಬೆಗಳ ಚಿತ್ರಗಳನ್ನು ನೋಡಿರಿ.**



ಹೆಚ್ಚಿನವರು ಇಷ್ಟಪಡುವ ಆಟಿಕೆ ಯಾವುದು? [ ]

ಕಾರು ಇಷ್ಟಪಡುವ ಎಷ್ಟು ಮಂದಿ ಇದ್ದಾರೆ? [ ]

ಪ್ರತಿಯೊಂದು ವಿಧದ ಆಟಿಕೆಗಳು ಎಷ್ಟಿವೆ ಎಂದು ಪಟ್ಟಿಯಲ್ಲಿ ಬರೆಯಿರಿ.

| ಆಟಿಕೆ | ಸಂಖ್ಯೆ |
|---|---|
|  | |
|  | |
|  | |
|  | |
|  | |
|  | |
|  | |

ಸಮಾನ ಸಂಖ್ಯೆಯ ಆಟಿಕೆಗಳು ಯಾವುವು?

ಒಬ್ಬರಿಗೆ ಮಾತ್ರ ಇಷ್ಟವಿರುವ ಆಟಿಕೆ ಯಾವುದು?

# ಹೂವುಗಳು ಹಲವು ವಿಧ



ಪ್ರತಿಯೊಂದು ವಿಧದ ಹೂವುಗಳು ಎಷ್ಟಿವೆ ಎಂದು ಕಂಡುಹಿಡಿದು ಬರೆಯಿರಿ.

| ಹೂಗಳು | ಸಂಖ್ಯೆ |
|---|---|
|  | |
|  | |
|  | |
|  | |
|  | |
|  | |

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in